ಕೊಡಗು ಸಂಗಾತಿ

ಬರ್ 16 ರಿಂದ 30, 1999 ಪಾಕ್ಷಿಕ ಪತ್ರಿಕೆ (ಬೊಂತೆಲ್ 30, ಜಾರ್ದೆ 1 ರಿಂದ 14ರ ತನಕ)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಾದಕಿ : ಪಟ್ಟಡ ಶೀಲಾಮಣಿ ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

.R. N. N. 240 ಸಂಪುಟ : 3 ಸಂಚಿಕೆ : 22 ಪುಟಗಳು : 24 ಬೆಲೆ ರೂ. : 5-00



[ಲೇಖನ ಒಳಪುಟಗಳಲ್ಲಿ]

ಅಚ್ಚಗನ್ನಡ ನುಡಿಕೋಶದ ಅಚ್ಚಕವಿ
ವಿದ್ವಾನ್ ಕೊಳಂಬೆ ಪುಟ್ಟಣಗೌಡರು – ಸಾಹಿತಿ ಶ್ರೇಷ್ಠರು

ಅರೆಭಾಷಿಕ ಗೌಡ ಜನಾಂಗಕ್ಕೊಂದು ಸಿಹಿಸುದ್ದಿ : ಮೈಸೂರಿನಲ್ಲಿ ಹುತ್ರಿ ಆಚರಣೆ

ವರ್ಷಂಪ್ರತಿ ಆಚರಿಸುತ್ತಿದ್ದಂತೆ ಈ ವರ್ಷವು ಹುತ್ರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ ಇದೇ ತಿಂಗಳ 24ರ ಬುಧವಾರದಂದು ಅಪರಾಹ್ನ 4 ಗಂಟೆಯಿಂದ 9ಗಂಟೆತನಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಮೈಸೂರಿನ ಗೌಡಯುವಶಕ್ತಿ, ಕೊಡಗು ಸಂಗಾತಿ ಸಂಸ್ಥೆ, ಹಾಗೂ ಕೊಡಗು ಮತ್ತು ಕನ್ನಡ ಜಿಲ್ಲಾ ಮಹಿಳಾ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಜರುಗಲಿದೆ. ಆದ್ದರಿಂದ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯರು, ಕಿರಿಯರು, ಮಹಿಳೆಯರು, ಮಕ್ಕಳಾದಿಯಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

ವಿ. ಸೂ. : 24ರ ರಾತ್ರಿ 7-30 ಗಂಟೆಗೆ ಪಾಡಿಶ್ರೀ ಇಗುತ್ತಪ್ಪ ದೇವಸ್ಥಾನದಲ್ಲಿ ನೆರೆಕಟ್ಟುವುದು. 8 ಗಂಟೆಗೆ ಕದಿರು ತೆಗೆಯುವುದು. ಉಳಿದಂತೆ 24ರ ರಾತ್ರಿ 8 ಗಂಟೆಗೆ ನೆರೆ ಕಟ್ಟುವುದು. 9 ಗಂಟೆಗೆ ಕದಿರು ತೆಗೆಯುವುದು. ನಂತರ 10 ಗಂಟೆಗೆ ಭೋಜನ ಸ್ವೀಕಾರಕ್ಕೆ ಉತ್ತಮವೆಂದು ತಿಳಿದುಬಂದಿದೆ. ನೆರೆಕಟ್ಟಲು ಬೇಕಿರುವ ವಸ್ತುಗಳು : ಪಚ್ಚಿನಾರ್(ಅಚ್ಚನಾರ್), ಎಲೆಗಳು : ಕುಂಬಳಸ್ಸೊಪ್ಪು, ಗೇರುಸೊಪ್ಪು, ಹಲಸಿನ ಸೊಪ್ಪು, ಆಲದ ಸೊಪ್ಪು, ಮಾವಿನಸೊಪ್ಪು.

ಮುಖಾಮುಖಿ ಕಾರ್ಯಕ್ರಮ

ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯ ಅಭಿವೃದ್ಧಿ ನಿಮಿತ್ತ ಲೇಖಕರು ಹಾಗೂ ಓದುಗರಿಂದ ಮುಖಾಮುಖಿ ಪ್ರಶ್ನಾವಳಿ ಕಾರ್ಯಕ್ರಮವನ್ನು ಮುಂದಿನ ತಿಂಗಳ ಡಿಸೆಂಬರ್ 26ರಂದು ಮಡಿಕೇರಿಯಲ್ಲಿರುವ ಕೊಡಗು ಗೌಡ ವಿದ್ಯಾ ಸಂಘದ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ತಮ್ಮ ತಮ್ಮ ಅನಿಸಿಕೆಗಳನ್ನು, ಪ್ರಶ್ನೆಗಳನ್ನು, ಇತರ ಅಭಿಪ್ರಾಯವನ್ನು ಅಂದು ನೀಡಿ ತಮ್ಮ ಅನುಮಾನವನ್ನು ಬಗೆಹರಿಸಲು ಸದವಕಾಶವನ್ನು ಕಲ್ಪಿಸಲಾಗಿದೆ. ಬರಲು ಸಾಧ್ಯವಿಲ್ಲದೆ ಇರುವ ಓದುಗರು ಪತ್ರ ಮುಖೇನ ಡಿ. 20ರ ಒಳಗೆ ಕೊಡಗು ಸಂಗಾತಿ ಕಛೇರಿಗೆ ಕಳುಹಿಸಿಕೊಡುವಂತೆ ಈ ಮೂಲಕ ಕೋರಲಾಗಿದೆ. ಬಾರಿಯಂಡ ಜೋಯಪ್ಪ, ಗುಡ್ಡೆಮನೆ ರಮೇಶ್, ಪಟ್ಟಡ ಶಿವಕುಮಾರ್, ಬೈತಡ್ಕ ನವೀನ್ ಬೆಳ್ಯಪ್ಪ ಕಾರ್ಯಕ್ರಮವನ್ನು ನಡೆಯಿಸಿ ಕೊಡಲಿದ್ದಾರೆ.

- ಸಂಪಾದಕಿ

'ಮುಖಾಮುಖಿ ವಿಭಾಗ', C/o ಕೊಡಗು ಸಂಗಾತಿ, 35, ಸವಿತಾ ನಿಲಯ,
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿ ಪುರಂ, ಮೈಸೂರು -12

ಶ್ರದ್ಧಾಂಜಲಿ ಮತ್ತು ಅಭಿನಂದನಾರ್ಹ

ಶತಮಾನದ ಅಂತ್ಯದಲ್ಲಿ ಭಾರತ ಕಂಡ ಅತ್ಯಂತ ಭೀಕರ ಒರಿಸ್ಸಾ ರಾಜ್ಯದ ಚಂಡಮಾರುತದಲ್ಲಿ ಸತ್ತವರಿಗೆ ಶ್ರದ್ಧಾಂಜಲಿಯನ್ನು, ನೊಂದವರಿಗೆ ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯು ಓದುಗರ ಮತ್ತು ನಾಡಿನ ಪರವಾಗಿ ಅನುಕಂಪವನ್ನು ಬಯಸುತ್ತದೆ.

ಹಾಗೆಯೇ ಒರಿಸ್ಸಾ ರಾಜ್ಯದ ಕೇಂದ್ರಪಾಡ ಜಿಲ್ಲೆಯನ್ನು ದತ್ತು ತೆಗೆದುಕೊಂಡಿರುವ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಎಸ್. ಎಂ. ಕೃಷ್ಣರ ಕಾರ್ಯವು ಶ್ಲಾಘನೀಯ ಮತ್ತು ಅಭಿನಂದನಾರ್ಹ

- ಸಂಪಾದಕಿ

ಕೂಡಲೆ ಬೇಕಾಗಿದ್ದಾರೆ.

ನಿರುದ್ಯೋಗಿ ಯುವಕ ಯುವತಿಯರಿಗೆ ಒಂದು ಸುವರ್ಣ ಅವಕಾಶ. ನಿಮ್ಮ ಬಿಡುವಿನ ವೇಳೆಯಲ್ಲಿ ಶ್ರಮವಹಿಸಿ ದುಡಿದಲ್ಲಿ ತಿಂಗಳಿಗೆ 5 ಸಾವಿರದಿಂದ 10 ಸಾವಿರದವರೆಗೆ ಸಂಪಾದಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

ಕೆ. ಬಿ. ಜೀವನ್ S/o ಕೆ. ಜಿ. ಬೋಪಯ್ಯ,
ಬಲಮುರಿ ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲೂಕು, ಕೊಡಗುಜಿಲ್ಲೆ

ನಿಧನ : ತೋಟಂಬೈಲು ನಾಣಯ್ಯನವರಿಗೆ ಮಾತೃ ವಿಯೋಗ

ದಿ. ತೋಟಂಬೈಲು ಮಾದಪ್ಪನವರ ಧರ್ಮಪತ್ನಿ ಅಮ್ಮವ್ವನವರು ದಿನಾಂಕ 5-11-1999ರಂದು ಸಿದ್ದಾಪುರದ ಅವರ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 88 ವರ್ಷ ಪ್ರಾಯವಾಗಿದ್ದು ಏಳು ಜನ ಮಕ್ಕಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು 6ರಂದು ಸಾವಿರಾರು ಜನರ ಸಮ್ಮುಖದಲ್ಲಿ ನಡೆಯಿತು. ಕೊಡಗು ಗೌಡ ಸಮಾಜದ ಅಧ್ಯಕ್ಷ ತೋಟಂಬೈಲು ನಾಣಯ್ಯನವರು ಶ್ರೀಯುತರ ಪುತ್ರರಾಗಿದ್ದಾರೆ.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :

ಪಟ್ಟಡ ಎಂ. ಪ್ರಭಾಕರ

ಚಂದಾ ಕಳುಹಿಸುವ ಮತ್ತು

ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 35, "ಸವಿತಾ ನಿಲಯ"

1ನೇ ಕ್ರಾಸ್, 4ನೇ ಬ್ಲಾಕ್,

ಜಯಲಕ್ಷ್ಮಿಪುರಂ, ಮೈಸೂರು - 570 012.

ಫೋನ್ : **0821/516771**

ಮಡಿಕೇರಿಯಲ್ಲಿ ಸಂಗಾತಿ ಕಛೇರಿ

ಸಂಗಾತಿ ಚಿಹ್ನೆ ಮತ್ತು ಪಾಕ್ಷಿಕ ಲಭ್ಯ

ಬೈತಡ್ಕ ಜಾನಕಿ ಬೆಳ್ಯಪ್ಪ

ನಂ. 21-16 ಎಲ್. ಐ. ಸಿ. ಹತ್ತಿರ

ರೇಸ್ ಕೋರ್ಸ್ ರಸ್ತೆ, ಮಡಿಕೇರಿ

ದೂರವಾಣಿ : 08272/28047

ಕೊಡಗು ಸಂಗಾತಿ ಚಿಹ್ನೆ ಲಭ್ಯ

ಪಾಂಡ್ಯನ್ ಕ್ಯಾಸೆಟ್ ಅಂಗಡಿ,

ಖಾಸಗಿ ಬಸ್ ನಿಲ್ದಾಣ, ಮಡಿಕೇರಿ - 571 201

ದೂರವಾಣಿ : 08272/29620

ಕುಂಭಗೌಡನ ಸೋಮಣ್ಣ

ಮಯೂರ ಕೋಲ್ಡ್ ಸ್ಟೋರೇಜ್

ಮುಖ್ಯ ರಸ್ತೆ, ಕುಶಾಲನಗರ - 571 234

ದೂರವಾಣಿ : 08276/73370 (R.)

ಅಮ್ಮಾಜೀರ ಪೊನ್ನಪ್ಪ

20, 1ನೇ ಮೈನ್, 4ನೇ ಕ್ರಾಸ್

ಸಾಕಮ್ಮ ಗಾರ್ಡನ್, ಬಸವನಗುಡಿ,

ಬೆಂಗಳೂರು - 04

ದೂರವಾಣಿ - 080/6342822

ಕಲ್ಲುಮುಟ್ಲು ಬಸಪ್ಪ

ನಂ. 233/9, 2ನೇ ಕ್ರಾಸ್, ನಂಜಪ್ಪ ಬ್ಲಾಕ್,

ಕೆಂಪೇಗೌಡ ನಗರ, ಬೆಂಗಳೂರು - 19

ದೂರವಾಣಿ - 080/6549669

ಒಳನೋಟ

ಚಂದಾ ವಿವರ

ಜೀವಾವಧಿ ಸದಸ್ಯತನ	-	**2000 ರೂ.**
ವಾರ್ಷಿಕ ಚಂದಾ	-	**120 ರೂ.**
ಅರ್ಧ ವಾರ್ಷಿಕ	-	**60 ರೂ.**
ಬಿಡಿ ಪ್ರತಿ	-	**5 ರೂ.**


ಸಂಪಾದಕೀಯ : ರಾಜಕೀಯ ಅಸ್ಥಿರತೆ

ಭಾರತಕ್ಕೆ ಸ್ವಾತಂತ್ರ್ಯ ಬಂದು 51 ವರ್ಷ ಕಳೆದರೂ ನಮ್ಮ ರಾಜಕೀಯ ಪರಿಸ್ಥಿತಿ ಅಧೋಗತಿಗೆ ಇಳಿಯುತ್ತಿದೆ. ಇದಕ್ಕೆ ಕಾರಣವೇನು? ನಾವು ಸ್ವಾತಂತ್ರ್ಯ ಗಳಿಸಿದ್ದೇ ತಪ್ಪೇ ಎಂಬ ಪ್ರಶ್ನೆ ಉದ್ಭವಿಸುತ್ತಿದೆ. ಪ್ರಜಾಪ್ರಭುತ್ವವೆಂದರೆ ಪ್ರಜೆಗಳು ಪ್ರಜೆಗಳಿಗಾಗಿ ಪ್ರಜೆಗಳಿಂದಲೇ ರಾಜಕೀಯ ವ್ಯವಸ್ಥೆಗೆ ಪ್ರಜಾಪ್ರಭುತ್ವವೆಂದು ಕರೆಯುತ್ತಾರೆ. ಯಾವುದೇ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಿರವಾಗಿ ಬದುಕಿಬಾಳಬೇಕಾದರೆ ಆ ದೇಶದ ಜನರು ಪ್ರಾಮಾಣಿಕರಾಗಿ ದೇಶ ಪ್ರೇಮದಿಂದ ಕೂಡಿರಬೇಕು. ಯಾವ ರಾಜಕೀಯ ಪಕ್ಷವಾಗಲೀ ಅಥವಾ ವ್ಯಕ್ತಿಯಾಗಲೀ ದೇಶದ ಬಗ್ಗೆ ಜನರ ಬಗ್ಗೆ ಪ್ರಾಮಾಣಿಕವಾದ ಪ್ರೇಮಿ ಹಾಗೂ ಕಳಕಳಿ ಇಲ್ಲದಿದ್ದರೆ ಅಂತಹ ರಾಜಕೀಯ ಪಕ್ಷವನ್ನು ಹಾಗೂ ವ್ಯಕ್ತಿಯನ್ನು ಯಾವ ದಾಕ್ಷಿಣ್ಯವಿಲ್ಲದೆ ಅಧಿಕಾರದಿಂದ ಕಿತ್ತೊಗೆದು ಪ್ರಾಮಾಣಿಕವಾಗಿರುವ ಭ್ರಷ್ಟರಲ್ಲದ ಪಕ್ಷಕ್ಕೆ ಬೆಂಬಲ ನೀಡಬೇಕು.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಜನತೆ ಭ್ರಷ್ಟಾಚಾರರ ವಿರುದ್ಧ ಸಿಡಿದೆದ್ದರೂ ಪೂರ್ಣ ಪ್ರಮಾಮದಲ್ಲಿ ಸಿಡಿದೇಳಲಿಲ್ಲ.

ಜನತೆ ರಾಜಕೀಯ ಪುಢಾರಿಗಳ ಆಮಿಷಕ್ಕೆ ಬಲಿಯಾಗದೆ ಜನತೆ ಪ್ರಾಮಾಣಿಕತೆಯಿಂದ ತನ್ನದೇ ಆದ ತೀರ್ಮಾನವನ್ನು ಕೈ ಕೊಳ್ಳುವಂತಾಗಬೇಕು. ಅದಲ್ಲದೆ ಈ 51 ವರ್ಷಗಳಲ್ಲಿ ನಡೆದು ಕೊಂಡು ಬಂದ ರೀತಿಯಲ್ಲಿ ಜನತೆ ವರ್ತಿಸಿದರೆ ನಮ್ಮ ದೇಶದ ರಾಜಕೀಯವು ಹಣದ ಬಲ, ಅಧಿಕಾರದ ಕುಮ್ಮಕ್ಕಿನಿಂದ ರಾಜ್ಯಭಾರ ನಡೆಸುವ ಪರಿಸ್ಥಿತಿ ಮುಂದುವರಿದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದದ್ದೂ ಹಾಗೂ ಪ್ರಜಾರಾಜ್ಯವೆನಿಸಿಕೊಂಡದ್ದು ಅರ್ಥವಿಲ್ಲದ ಸ್ಥಿತಿಯಾಗಿ ಭಾರತ ಸ್ವಾತಂತ್ರ್ಯ ಸಂಗಮದಲ್ಲಿ ಲಕ್ಷಾಂತರ ಮಂದಿ ಪ್ರಾಣತ್ಯಾಗ ಮಾಡಿದವರ ಹಿಡಿ ಶಾಪಕ್ಕೆ ಗುರಿಯಾಗಿ ಮುಂದಿನ ಪೀಳಿಗೆಯ ಭವಿಷ್ಯ ಶೂನ್ಯವಾಗುವುದೆಂದು ಸಂಗಾತಿ ಭಾವಿಸುತ್ತದೆ.

ಗುಡ್ಡೆಮನೆ ಅಪ್ಪಯ್ಯಗೌಡ ಸಂಸ್ಮರಣ ಸಮಿತಿ, ಮಡಿಕೇರಿ



31-10-1999ರಂದ್ ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡ್ರ್‌ಗೆ ಶ್ರದ್ಧಾಂಜಲಿ

ತಾರೀಖ್ 31-10-1999ರಂದ್ 'ಹುತಾತ್ಮರ ದಿನಾಚರಣೆ'ಗೆ ಮಡಿಕೇರಿ ಕೋಟೆ ಆವರಣಲಿ ಬೆಳ್ಗ್ 9-30 ಗಂಟೆಗೆ ಮ್ಯಾಲೆನ ಸಮಿತಿ ಮತ್ತೆ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಒಟ್ಟಿಗೆ ಸೇರಿ, ತಾರೀಖ್ 31-10-1837ರಂದ್ ಗಲ್ಲಿಗೇರ್ದ 'ಹುತಾತ್ಮ' ಗುಡ್ಡೆಮನೆ ಅಪ್ಪಯ್ಯ ಗೌಡ್ರ ಆತ್ಮಕ್ಕೆ ಎರಡು ನಿಮಿಷ ಮೌನ ನಿಂತ್ 'ಶ್ರದ್ಧಾಂಜಲಿ' ಅರ್ಪಿಸಿತ್. ಈ ಸಂದರ್ಭಲಿ ಮಾಜೀ ಮಂತ್ರಿಗ ಶ್ರೀ ದಂಬೆಕೋಡಿ ಚಿಣ್ಣಪ್ಪನವ್ ಮಾತಾಡಿ ಸಾರ್ವಜನಿಕರ ಸಾಕಾರದೊಟ್ಟಿಗೆ ಮುಂದೆ ಹುತಾತ್ಮರ ಜ್ಞಾಪಕಾರ್ಥ ಸ್ಮಾರಕ ನಿರ್ಮಾಣ ಮಾಡಿಕೆ ಸರ್ಕಾರನ ಒತ್ತಾಯ ಮಾಡಕುತ್ತೇಳ್ರೊ. 162 ವರ್ಷದ ಹಿಂದೆನೆ ಸ್ವಾತಂತ್ರ್ಯ ಹೋರಾಟಗಾರರೊಬ್ಬರ್ನ ಜನ ಮರೀತಿರ್‌ದು ಬಾರಿ ಬ್ಯಾಜಾರತ್ತೇಳ್ರೊ. ಹಂಗೆ ಶ್ರೀ ಪಂಜಿಪಳ್ಳ ವೆಂಕಪ್ಪನವ್, ಕೊಡಗು ಗೌಡ ವಿದ್ಯಾಸಂಘದ ಉಪಾಧ್ಯಕ್ಷರ್, ಮಾತಾಡಿ ಗುಡ್ಡೆಮನೆ ಅಪ್ಪಯ್ಯ ಗೌಡ್ರ ಸ್ಮಾರಕ ನಿರ್ಮಾಣಕ್ಕೆ ಹೋರಾಟ ಮಾಡ್‌ಕೆ ಸಾರ್ವಜನಿಕ ಸಮಿತಿ ಮಾಡ್ದು ಅವಶ್ಯ ಉಟ್ಟುತ್ತೇಳ್ರೊ. ಇಂದ್‌ನ ಕಾರ್ಯಕ್ರಮಲಿ ಶ್ರೀ ತುಂತಜೆ ಗಣೇಶ್, ಅಕಾಡೆಮಿ ಅಧ್ಯಕ್ಷ, ಕೋಡಿ ಚಂದ್ರಶೇಖರ್, ಶ್ರೀಮತಿ ನೆಯ್ಯಣಿರ ಹೇಮಲತ, ಶ್ರೀ ಕೋಳಿ ಮುಡಿಯನ ಅನಂತ್‌ಕುಮಾರ್ ಗೌರವ ಕಾರ್ಯದರ್ಶಿ, ಕೊಡಗು ಗೌಡ ವಿದ್ಯಾ ಸಂಘ, ಕಾವೇರಿ ನಾಡ್ ಸಂಸ್ಥಾಪಕ ಶ್ರೀ ಅಮ್ಮಾಜೀರ ಪೊನ್ನಪ್ಪ, ಅಕಾಡೆಮಿ ನಿರ್ದೇಶಕ ಶ್ರೀ ಕರಕರನ ಉತ್ತಯ್ಯ, ಶ್ರೀ ಗುಡ್ಡೆಮನೆ ಅಪ್ಪಾಜಿ, ಶ್ರೀ ಗುಡ್ಡೆಮನೆ ಬೆಳ್ಯಪ್ಪ, ಬೈತಡ್ಕ ಬೆಳ್ಯಪ್ಪ, ಬೈಮನ ವಿಶ್ವನಾಥ, ಕಂದಾಯ ಅಧಿಕಾರಿ, ಬೈತಡ್ಕ ನವೀನ್ ಬೆಳ್ಯಪ್ಪ, ಶ್ರೀ ಗೋವಿಂದಮ್ಮನ ಪ್ರವೀಣಕುಮಾರ್, ಕುಂಜಿಲನ ಸತೀಶ್, ಕುಂಜಿಲನ ಸುರೇಶ್, ಕೇಚಪ್ಪನ ಕಸ್ತು, ಕೊಡಗು ಸಂಗಾತಿ ಪತ್ರಿಕೆಯ ಗೌ. ಸಂಪಾದಕ ಪಟ್ಟಡ ಪ್ರಭಾಕರ್ ಸಹ ಕಡೆ ಗಳಿಗೆಲಿ ಬಂದ್ ನಮ್ಮನ್ನ ಸೇರಿಕಂಡೊ. ಮತ್ತೆ ಸಾರ್ವಜನಿಕ ಬಂದುಗ ಹಾಜರಿದ್ರೊ. ಶ್ರೀ ಗುಡ್ಡೆಮನೆ ರಮೇಶನವು ಸಮಿತಿ ಸಂಚಾಲಕರ್ ಕಾರ್ಯಕ್ರಮನ ನಿರೂಪಿಸಿದೊ.

ವರದಿ : ಗುಡ್ಡೆಮನೆ ರಮೇಶ್

ಜನಾಂಗದ ಮೇಲ್ವರ್ಗಕ್ಕೆ ಬೇಕು
ಕೆಳವರ್ಗದ ಡಾಕ್ಟರ್, ಇಂಜಿನಿಯರ್‌ಗಳು
ಆದರೆ ಕೆಳವರ್ಗದ ಜನರೇಕೆ ಬೇಡ?
ನಮ್ಮಲೇಕೆ ಈ ತಾರತಮ್ಯ?

ಪಟ್ಟಡ ಪ್ರಭಾಕರ

ಅಚ್ಚಗನ್ನಡ ನುಡಿಕೋಶದ ಅಚ್ಚಕವಿ : ದಿ. ಕೊಳಂಬೆ ಪುಟ್ಟಣ್ಣಗೌಡರು

ಆಂಗ್ಲ ಭಾಷಾ ವ್ಯಾಮೋಹದಿಂದ ಪಾರಾಗದೆ ಅನ್ಯಭಾಷಾ ಬದನಿಕೆಗಳಿಂದ ಬಿಡಿಸಿಕೊಳ್ಳಲಾರದೆ ಕನ್ನಡ ಕನ್ನಡ ಎಂದು ಬಡಿದಾಡಿಕೊಳ್ಳುವ ಈ ಸಂಧಿಕಾಲದಲ್ಲಿ ಕನ್ನಡದ ಪ್ರಥಮ 'ಅಚ್ಚಗನ್ನಡ ನುಡಿಕೋಶ' ಒಂದು ಬಿಡುಗಡೆಯಾಗಿ ಐದಾರು ವರ್ಷಗಳು ಸಂದರೂ ಯಾವುದೇ ವಿಶೇಷ ಮಹತ್ವವನ್ನು ಪಡೆಯದೆ ಗ್ರಂಥಾಲಯಗಳ ಕಪಾಟನ್ನು ಅಲಂಕರಿಸಿರುವುದು ನಿಘಂಟಿನ ಬಗೆಗಿನ ನಮ್ಮ ಆಸಕ್ತಿಯನ್ನು ಸೂಚಿಸುತ್ತದೆ. ಕನ್ನಡದ ಪ್ರಥಮ ಗದ್ಯಕಾವ್ಯವೆಂದು ಹೆಸರಾದ 'ವಡ್ಡಾರಾಧನೆ' ಯಿಂದ ಮೊದಲುಗೊಂಡು 'ಕಬ್ಬಿಗರ ಕಾವ'ದವರೆಗಿನ ಕಾವ್ಯಗಳಲ್ಲಿ ಬರುವ ಅಚ್ಚಗನ್ನಡ ಪದಗಳನ್ನು ತದ್ಭವಗಳೂ ಸೇರಿದಂತೆ ಸಂಗ್ರಹಿಸಿ ಅಕಾರಾದಿಯಾಗಿ ಕೊಟ್ಟು ಈ ನುಡಿ ಕೋಶದಲ್ಲಿ ಅರ್ಥ ವಿವರಿಸಲಾಗಿದೆ. ಪದಗಳಿಗೆ ಇರಬಹುದಾದ ಸಂವಾದಿ ಪದಗಳನ್ನು ಭಿನ್ನಾರ್ಥಗಳನ್ನೂ, ರೂಢಿಯಲ್ಲಿರುವ ಅರ್ಥಗಳನ್ನು ಪೂರ್ಣವಾಗಿ ಕೊಡಲಾಗಿದೆ. ಅಲ್ಲಲ್ಲಿ ವ್ಯಾಕರಣ ವಿಶೇಷಗಳನ್ನು ನಮೂದಿಸಿದೆ. ಈ ನುಡಿಕೋಶದಿಂದ ಸಾಹಿತ್ಯ ವಿದ್ಯಾರ್ಥಿಗಳಾದರೂ ಅಚ್ಚಗನ್ನಡ ಪದಗಳನ್ನು ಮರೆಯದಂತೆ ಮಾಡಿದ್ದಾರೆ. ನಮ್ಮ ಅಚ್ಚಗನ್ನಡದ ಪ್ರಪ್ರಥಮ ಕವಿ ದಿ. ಕೊಳಂಬೆ ಪುಟ್ಟಣ್ಣಗೌಡರು.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೋಕಿನ ಚೊಕ್ಕಾಡಿಯ ಕೊಳಂಬೆ ಎಂಬ ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಪುಟ್ಟಣ್ಣಗೌಡರು ನಾಲ್ಕನೇ ತರಗತಿವರೆಗಿನ ಶಾಲಾ ಶಿಕ್ಷಣ ಪಡೆದವರು. ಪ್ರಾಥಮಿಕ ಶಾಲಾ ಶಿಕ್ಷಕನಾಗಿ ವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದ ಕೊಳಂಬೆಯವರು ಸತತ ಅಧ್ಯಯನ ಹಾಗೂ ಛಲದಿಂದ ಮದರಾಸು ವಿಶ್ವವಿದ್ಯಾನಿಲಯದಿಂದ 'ಕನ್ನಡ ವಿದ್ವಾನ್' ಪದವಿ ಪಡೆದು ಪ್ರೌಢಶಾಲಾ ಕನ್ನಡ ಪಂಡಿತರಾಗಿ ತಮ್ಮ ಹೃದಯ ಸಂಪತ್ತಿನಿಂದ ಶಿಷ್ಯ ವೃಂದದ ಜ್ಞಾನ ಸಂಪತ್ತನ್ನು ಬೆಳೆಸಿದವರು.

'ಹೂವೀಡು' ಎಂಬ ಶಿಶುಗೀತೆಗಳ ಹೂವನ್ನು ಸಾಹಿತ್ಯ ದೇವಿಗೆ ಅರ್ಪಿಸುವುದರ ಮೂಲಕ ಸಾಹಿತ್ಯ ರಂಗಕ್ಕೆ ಪಾದಾರ್ಪಣೆ ಮಾಡಿದ ಕೊಳಂಬೆಯವರ ಅಚ್ಚಗನ್ನಡ ಕೃಷಿ ಅವರ ಹೆಸರನ್ನು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿಸಿದೆ. ಹದಿಮೂರನೇ ಶತಮಾನದ ಆದಿಭಾಗದಲ್ಲಿ ಅಚ್ಚಗನ್ನಡದಲ್ಲಿ ಬರೆಯುತ್ತೇನೆಂದು ಹೊರಟ ಆಂಡಯ್ಯನ 'ಕಬ್ಬಿಗಗ ಕಾವ' ಎಂಬ ಚಂಪೂಕಾವ್ಯದಲ್ಲಿ ಸಂಸ್ಕೃತ ಪದಗಳು ಇಲ್ಲದಿದ್ದರೂ ಅನೇಕ ತದ್ಭವಗಳಿವೆ. ಸಂಸ್ಕೃತ ಛಂದೋನಿಯಮದ ವರ್ಣವೃತ್ತಗಳಿವೆ ಈ ಇಪ್ಪತ್ತನೆಯ ಶತಮಾನದಲ್ಲಿ ಇಂತಹ ಸಾಹಸಕ್ಕೆ ಕೈಯಿಕ್ಕಿದ ಮುಳಿಯ ತಿಮ್ಮಪ್ಪಯ್ಯನವರ 'ಸೊಬಗಿನ ಬಳ್ಳಿ' ಎಂಬ ಕಾವ್ಯದಲ್ಲೂ ತದ್ಭವಗಳು ಹೆಚ್ಚಾಗಿ ಬಂದಿವೆ. ಹೆಚ್ಚೇಕೆ ಈ ಎರಡೂ ಕಾವ್ಯಗಳ ಹೆಸರೇ ಸಂಸ್ಕೃತ ಮೂಲದಿಂದ ಹುಟ್ಟಿದವುಗಳು. (ಕಾವ್ಯಗಾರರ ಕಾಮ - ಕಬ್ಬಿಗರ ಕಾವ; ಸೌಭಾಗ್ಯವಲ್ಲೀ-ಸೊಬಗಿನ ಬಳ್ಳಿ) ಕೊಳಂಬೆಯವರು ಅವರಿಗಿಂತಲೂ ಮಿಗಿಲಾಗಿ ತದ್ಭವಗಳನ್ನು ಬಳಸದೆ ಅಚ್ಚಗನ್ನಡ ನುಡಿಗಳಲ್ಲಿ ಕನ್ನಡದ ಸ್ವತಂತ್ರವಾದ ಮಾತ್ರಾಗಣದ ವೀರ ಚೌಪದಿ ಛಂದಸ್ಸಿನಲ್ಲಿ 'ಕಾಲೂರ ಚೆಲುವೆ' ಎಂಬ ಕಾವ್ಯವನ್ನು ವಿರಚಿಸಿ ಕನ್ನಡ ಕವಿ ಚರಿತ್ರೆಯಲ್ಲಿ ಶಾಶ್ವತ ಸ್ಥಾನವನ್ನು ಪಡೆದುಕೊಂಡರು. ಪ್ರೊ. ದೇ.ಜ.ಗೌ. ಹೇಳುವಂತೆ 'ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರು ನಡೆದದ್ದೇ ಮಾರ್ಗವಾಗುತ್ತದೆ. ಆದರೆ ಆ ಮಾರ್ಗದಲ್ಲಿ ನಡೆಯುವ ಧೈರ್ಯ ಅನಂತರ ಇತರರಿಗಿಲ್ಲವಾಗುತ್ತದೆ.' ಕೊಳಂಬೆಯವರ ಅಚ್ಚಗನ್ನಡದ ಎರಡನೇ ಕೃತಿ 'ನುಡಿವಣಿಗಳು' ಸಾವಿರ ಮುಕ್ತಕಗಳ ನುಡಿವಣಿಗಳು ಅವರ ಜೀವನಾನುಭವದ ಮುತ್ತಿನ ಮಣಿಗಳು.

ಯಕ್ಷಗಾನ ಮನೆತನದಲ್ಲಿ ಹುಟ್ಟಿದ ಕೊಳಂಬೆಯವರು ಪ್ರಸಿದ್ಧ ಯಕ್ಷಗಾನ ಅರ್ಥದಾರಿ. ಸರಳ ಸುಂದರ ಮಾತುಗಾರಿಕೆ. ಪಾತ್ರೋಚಿತ ಭಾವ ಪ್ರಜ್ಞೆಗಳಿಂದ ಕಲಾರಸಿಕರ ಮನಗೆದ್ದವರು. ಕೃಷ್ಣ, ರಾಮ, ಕೌರವ, ಬೃಹನ್ನಳೆ, ಅಕ್ರೂರ ಮೊದಲಾದ ಪಾತ್ರಗಳಿಗೆ ಕೊಳಂಬೆಯವರು ಜೀವ ತುಂಬುತ್ತಿದ್ದರಂತೆ. ಚೊಕ್ಕಾಡಿಯ ಯಕ್ಷಗಾನ ನಾಟಕ ಮಂಡಳಿಯಲ್ಲಿ ಪಾತ್ರಧಾರಿಗಳಾಗಿಯೂ ಕೀರ್ತಿ ಪಡೆದವರು. ಪ್ರಸಂಗ ಕರ್ತರೂ ಆದ ಇವರು 'ನೆಲ್ಲೂರಗೆಲ್ಲ', 'ಅಂಧಕಾಸುರ ಕಾಳಗ' ಮುಂತಾದ ಯಕ್ಷಗಾನ ಕೃತಿಗಳನ್ನು ರಚಿಸಿರುವರು. ಜೋತಿಷ್ಯ ಗ್ರಹಗಣಿತವೇ ಮೊದಲಾದ ಖಗೋಲ ವಿಜ್ಞಾನಗಳಲ್ಲೂ ಒಲವಿದ್ದ ಕೊಳಂಬೆಯವರ ಹಸ್ತ ಸಾಮುದ್ರಿಕಾಕೃತಿ, 'ಬೆರಳುಗಳಿಂದ ಅದೃಷ್ಟ' ಮತ್ತು 'ಹಸ್ತ ಸಾಮುದ್ರಿಕಾ ಶಾಸ್ತ್ರ', 'ತಾಳಿ' ಮತ್ತು 'ತಲೆಯಂತೆ ಬಾಲ' ಇವರ ಸಾಮಾಜಿಕ ನಾಟಕಗಳಾದರೆ; 'ಹೂವೀಡು' ಮತ್ತು 'ಮಾತಿಲ್ಲಾ ಮಾತಿಲ್ಲಾ' ಶಿಶುಗೀತೆಗಳು.

ಕೊಳಂಬೆಯವರು ಕವಿ, ಕಲಾವಿದನಾಗಿ ಸಲ್ಲಿಸಿದ ಸೇವೆಯನ್ನು ನೆನೆದು ಅವರ ಹುಟ್ಟೂರಾದ ಚೊಕ್ಕಾಡಿಯ ಶ್ರೀರಾಮಸೇವಾ ಸಮಿತಿಯವರು ೧೯೭೫ರ ಶ್ರೀರಾಮನವಮಿಯಂದು ಅಭಿನವ ಕಿಟ್ಟೆಲ್ ಪ್ರೊ. ಎಂ. ಮರಿಯಪ್ಪ ಭಟ್ಟರ ಘನ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ 'ಅಭಿನವ ಆಂಡಯ್ಯ' ಎಂಬ ಬಿರುದನ್ನಿತ್ತರು. ವೃತ್ತಿಯಿಂದ ನಿವೃತ್ತರಾದರೂ ಬರವಣಿಗೆಯಿಂದ ನಿವೃತ್ತರಾಗದ ಕೊಳಂಬೆಯವರು ಅಲ್ಪಕಾಲದ ಅನಾರೋಗ್ಯದಿಂದ ೨೬-೧-೧೯೮೮ ರಂದು ಕಾಲವಾದರೂ. ಅವರ ಮಕ್ಕಳಾದ ಡಾ. ಕೊಳಂಬೆ ಚಿದಾನಂದ ಗೌಡ ಮತ್ತು ಶ್ರೀಮತಿ ಶೀಲಾವತಿ ಕೊಳಂಬೆ ಇವರು ಸ್ವಂತ ಬಂಡವಾಳವನ್ನು ಹೂಡಿ ೫೧೩ ಪುಟಗಳ 'ಅಚ್ಚಗನ್ನಡ ನುಡಿಕೋಶ'ವನ್ನು ಪ್ರಕಟಿಸುವ ಮೂಲಕ ತಮ್ಮ ಪಿತೃ ಋಣವನ್ನು ತೀರಿಸಿ ಕನ್ನಡ ನಾಡಿಗೆ, ತನ್ಮೂಲಕ ಕನ್ನಡ ನಾಡಿಗೆ ಮಹದುಪಕಾರ ಮಾಡಿರುವರು. ಪ್ರೊ. ದೇ.ಜ.ಗೌ. ಈ ನುಡಿಕೋಶದ ನುಡಿಮಣಿಹ (ಮುನ್ನುಡಿ)ದಲ್ಲಿ ಹೇಳಿದಂತೆ ಈ ನುಡಿಕೋಶ 'ಬೆಳ್ಳರ ಕೈಪ್ರೊಕ್ಕ ನಿಧಿ, ಕವಿ ವಿದ್ವಾಂಸರ ವಿದ್ಯಾರ್ಥಿಗಳ ತವನಿಧಿ' ಆಗಲಿ. ಮೂಡು-ಪಡುಗಳನ್ನು ಮರೆತು ಪೂರ್ವ-ಪಶ್ಚಿಮಗಳಿಗೇ ಜೋತು ಬಿದ್ದ ನಮ್ಮನ್ನು ಬಡಿದೆಬ್ಬಿಸಿ, ದೇಸಿಯ ನುಡಿಗಳ ಬೆಡಗಿನ ಕಡೆಗೆ ಆಕರ್ಷಿಸಲಿ ಎಂದು ಹಾರೈಸುವ .

' ಸಿರಿಗನ್ನಡಂ ಗೆಲ್ಗೆ '

ಪಿ. ಜಿ. ಅಂಬೆಕಲ್ ಎಂ.ಪಿ., ಬಿ.ಇಡಿ., ಚೆಟ್ಟಳ್ಳಿ

ಆರೋಗ್ಯ ಚಿಂತನೆ

ಎದೆ ನೋವು (Chest Pain) :

ಯಾವಾಗಾದರು ಒಮ್ಮೊಮ್ಮೆ ಎದೆನೋವು ಕಾಣಿಸಿಕೊಳ್ಳುವುದು ಸಾಮಾನ್ಯ. ಎದೆನೋವು ಎಂದೊಡನೆ ಎಲ್ಲರೂ ಭಯಬೀಳುತ್ತಾರೆ. ತಮ್ಮ ಹೃದಯ ದುರ್ಬಲವಾಗಿದೆಯೆ/ ಹೃದಯ ನಿಂತು ಬಿಟ್ಟರೆ? ಹೀಗೆ ಎದೆನೋವು ಅಂದೊಡನೆ ಅದು ಹೃದಯಕ್ಕೆ ಸಂಬಂಧಿಸಿದುದು ಅಂತ ತಿಳಿದು ಚೆನ್ನಾಗಿರುವ ಹೃದಯವನ್ನು 'ಡಬ್ ಡಬ್' ಅಂತ ಬಡಿದುಕೊಳ್ಳುವಂತೆ ಮಾಡುತ್ತಾರೆ. ಒಂದು ಡಾಕ್ಟರ ಬಳಿ ಹೋದರೆ ಇವರಿಗೆ ಸಮಾಧಾನವಾಗದು. ಹೃದಯಕ್ಕೆ ಸಂಬಂಧವಿಲ್ಲದ ಎದೆನೋವಾಗಿದ್ದರೂ ಸಹ ಹಲವಾರು ವೈದ್ಯರುಗಳ ಬಳಿ ಹೋಗಿ ಹಣ ಸುರಿಯುತ್ತಾರೆ. ಎದೆಯ ಪಟ್ಟಿ (ಇ.ಸಿ.ಜಿ) ಎಕ್ಸರೇ, ಸ್ಕ್ಯಾನಿಂಗ್ (ಇಕೋಕಾರ್ಡಿಯೋಗ್ರಾಫಿ), ರಕ್ತ ಮೂತ್ರದ ಪರೀಕ್ಷೆ ಹೀಗೆ ಹಲವಾರು ಪರೀಕ್ಷೆಗಳನ್ನು ಮಾಡಿಸುತ್ತಾರೆ. ಆದರೆ ಎದೆ ನೋವಿರುವ ಎಲ್ಲಾ ಸಂದರ್ಭಗಳಲ್ಲಿ ಇವು ಬೇಕಾಗಿಲ್ಲ ಇನ್ನು ಕೆಲವರು ಹೃದಯಕ್ಕೆ ಸಂಬಂಧಿಸಿದ ಎದೆನೋವು ಆಗಿದ್ದರೂ ನಿರ್ಲಕ್ಷಿಸಿ ಏನೂ ಮಾಡದೆ ಸಾವನ್ನು ಆಹ್ವಾನಿಸಿಕೊಳ್ಳುವವರೂ ಇದ್ದಾರೆ.

ಎದೆಯ ಭಾಗದಲ್ಲಿ ನೋವುಂಟಾಗಲು ಹಲವಾರು ಕಾರಣಗಳಿರಬಹುದು. ಎದೆನೋವು ಆದೊಡನೆ ಅದು ಹೃದಯಕ್ಕೇ ಸಂಬಂಧಿಸಿದುದು ಬೇರೆ ಯಾವುದಕ್ಕೂ ಅಲ್ಲ ಅಂತ ತಿಳಿಯುವುದು ಶುದ್ಧ ತಪ್ಪು. ಎದೆನೋವು ಕಾಣಿಸಿಕೊಳ್ಳುವ ಶೇಖಡ 50ಕ್ಕಿಂತಲೂ ಹೆಚ್ಚು ವ್ಯಕ್ತಿಗಳಲ್ಲಿ ಎದೆನೋವಿಗೆ ಕಾರಣ ಹೃದಯಕ್ಕೆ ಸಂಬಂಧಿಸಿರದ ಖಾಯಿಲೆಗಳೇ ಆಗಿರುತ್ತದೆ.

ಹಾಗಾದರೆ ಎದೆನೋವಿಗೆ ಕಾರಣವಾಗುವ ವಿವಿಧ ರೋಗಗಳು ಯಾವುವು? ಆ ರೋಗಗಳನ್ನು ತಿಳಿಯುವುದು ಹೇಗೆ? ಹೃದಯಕ್ಕೆ ಸಂಬಂಧಿಸಿದ ಎದೆನೋವೆಂದು ಗುರುತಿಸುವುದು ಹೇಗೆ? ಪರಿಹಾರ ಹೇಗೆ? ಈ ವಿಷಯವನ್ನು ಜನ ಸಾಮಾನ್ಯರೆಲ್ಲರೂ ತಿಳಿದಿರಬೇಕು.

1. ಅನ್ನನಾಳ / ಜಠರಕ್ಕೆ ಸಂಬಂಧಿಸಿದ್ದು (ಗ್ಯಾಸ್ಟ್ರಿಕ್, Acidity) : ಜಠರದಲ್ಲಿ ಅತಿಯಾಗಿ ಆಮ್ಲ ಉತ್ಪತ್ತಿಯಾಗುತ್ತಿದ್ದಲ್ಲಿ ಎದೆಯ ಒಳಗೆ ಉರಿಯಾದಂತೆ ಅನುಭವ, ಹುಳಿ ತೇಗು ಉಂಟಾಗಬಹುದು. ಹೆಚ್ಚಿನ ಸಂದರ್ಭಗಳಲ್ಲಿ ಇದನ್ನೇ ಹೃದಯಬೇನೆ ಎಂಬುದಾಗಿ ಕೆಲವರು ತಿಳಿಯುತ್ತಾರೆ. ಜಾಸ್ತಿ ಖಾರ, ಎಣ್ಣೆ ಪದಾರ್ಥ, ಎಣ್ಣೆಯಲ್ಲಿ ಕಾಯಿಸಿದ ಆಹಾರ, ಮಸಾಲೆ, ಜಾಸ್ತಿ ಹುಳಿ ಸೇವನೆ, ಜಾಸ್ತಿ ಕಾಫಿ, ಟೀ ಕುಡಿಯುವುದು, ಬೀಡಿ ಸಿಗರೇಟು ಸೇವನೆ, ಕುಡಿತ, ಸಮಯಕ್ಕೆ ಸರಿಯಾಗಿ ಊಟ ಮಾಡದೆ ಇರುವುದು ಈ ಅಂಶಗಳು ಜಾಸ್ತಿ ಜಾಸ್ತಿ ಜಠರದ ಆಮ್ಲ ಬಿಡುಗಡೆ ಮಾಡುತ್ತವೆ. ಅತಿಯಾದ ಉದ್ವೇಗ, ಗಾಬರಿ, ಚಿಂತೆ ಸಹ ಜಾಸ್ತಿ ಆಮ್ಲ ಉತ್ಪತ್ತಿಯಾಗಲು ಕಾರಣವಾಗುತ್ತದೆ. ಎದೆಉರಿ ಇರುವ ವ್ಯಕ್ತಿಗೆ ಬಹಳ ದಿನಗಳಿಂದ ಆಗಾಗ ಹೊಟ್ಟೆ ನೋವು ಸಹ ಕಾಣಿಸಿಕೊಳ್ಳುತ್ತಿದ್ದರೆ, ಕರುಳಿನ ಹುಣ್ಣು ಸಹ ಇರಬಹುದು. ಬೇರಿಯಂ ಎಕ್ಸ್‌ರೇ, ಎಂಡೋಸ್ಕೋಪಿ (Endoscopy) ಈ ಪರೀಕ್ಷೆಗಳಿಂದ ಈ ರೋಗಗಳನ್ನು ಪತ್ತೆ ಮಾಡಬಹುದು. ಎದೆ ಉರಿಯಿರುವ ವ್ಯಕ್ತಿಗಳು ಮೇಲೆ ತಿಳಿಸಿದ ಆಹಾರ ವಸ್ತುಗಳನ್ನು ಚಟಗಳನ್ನು ಪೂರ್ತಿಯಾಗಿ ವರ್ಜಿಸಬೇಕು. ಎದೆ ಉರಿ ಕಾಣಿಸಿಕೊಳ್ಳುವಾಗ 'ಆಂಟಾಸಿಡ್' ಔಷದ (Digene ಇತ್ಯಾದಿ) ಉಪಯೋಗಿಸುವುದರಿಂದ ಉರಿ ಶಮನವಾಗುತ್ತದೆ.

2. ಶ್ವಾಸಕೋಶಕ್ಕೆ ಸಂಬಂಧಿಸಿದ್ದು : ಜ್ವರ, ಕೆಮ್ಮಿನೊಡನೆ ಎದೆನೋವು ಸಹ ಇದ್ದಲ್ಲಿ ಶ್ವಾಸಕೋಶದ ಸೋಂಕು ಇರಬಹುದು (ಬ್ರಾಂಕೈಟಿಸ್, ನ್ಯುಮೋನಿಯಾ ಇತ್ಯಾದಿ) ಆಗಾಗ ಬರುತ್ತಿರುವ ಕೆಮ್ಮು ಸಹ ಎದೆನೋವಿಗೆ ಸಾಮಾನ್ಯವಾದ ಕಾರಣವಾಗಿದೆ. ಕೆಮ್ಮಿದಾಗ ಎದೆಗೂಡಿನ ಸ್ನಾಯುಗಳು ಸಂಕುಚಿತಗೊಳ್ಳುವುದರಿಂದ ನೋವಾಗಬಹುದು. ಕೆಮ್ಮು ಕಡಿಮೆಯಾಗುತ್ತಿದ್ದಂತೆಯೆ ಎದೆನೋವು ಸಹ ನಿಲ್ಲುತ್ತದೆ. ಶ್ವಾಸಕೋಶದ ಹೊರ ಪೊರೆಯು ಸೋಂಕಾದಲ್ಲಿ (Pleurasy) ಎದೆನೋವು ಕಾಣಿಸಿಕೊಳ್ಳುತ್ತದೆ. ಜೋರಾಗಿ ಉಸಿರು ಎಳೆದುಕೊಂಡಾಗ 'ಚುಳ್' ಎಂದು ನೋವಾಗಬಹುದು. ಬಹಳ ಸಮಯದಿಂದ ಜ್ವರ, ಕೆಮ್ಮು, ಎದೆ ನೋವು ಇದ್ದಲ್ಲಿ ಎಕ್ಸ್‌ರೇ (X-Ray) ತೆಗೆಸಿ ಕ್ಷಯ (T. B.) ಇತ್ಯಾದಿ ರೋಗವಿದೆಯೇ? ಎದೆಗೂಡಿನಲ್ಲಿ ನೀರು/ಕೀವು ಸೇರಿಕೊಂಡಿದೆಯೆ? ಎಂಬುದನ್ನು ತಿಳಿಯುವುದು ಕ್ಷೇಮ.

3. ಸ್ನಾಯು/ಪಕ್ಕೆಲುಬುಗಳಿಗೆ ಸಂಬಂಧಿಸಿದ್ದು : ಇದು ಸಹ ಎದೆನೋವಿಗೆ ಅತ್ಯಂತ ಸಾಮಾನ್ಯವಾದ ಕಾರಣವಾಗಿದೆ. ಒಮ್ಮೆಗೆ ಭಾರ ಎತ್ತಿದಾಗ, ಏಟಾದಾಗ, ಬಿದ್ದಾಗ ಎದೆಗೂಡಿನ ಸುತ್ತ ಇರುವ ಸ್ನಾಯುಗಳಿಗೆ ಏಟಾಗಬಹುದು. ಆ ಭಾಗದಲ್ಲಿ ಅಮುಕಿದಾಗ ಅತಿಯಾದ ನೋವಾಗುತ್ತದೆ. ಪಕ್ಕೆಲುಬುಗಳ ಉರಿಯೂತ (Costochondritis) ಸಹ ಎದೆನೋವಿಗೆ ಇನ್ನೊಂದು ಸಾಮಾನ್ಯ ಕಾರಣ. ಎದೆಯ ಎದುರು ಭಾಗದ ಮಧ್ಯದಲ್ಲಿರುವ ಮೂಳೆಗೆ (Sternum) ಎರಡೂ ಬದಿಯಿಂದ ಪಕ್ಕೆಲುಬುಗಳು ಬಂದು ಸೇರಿಕೊಳ್ಳುತ್ತದೆ. ಇವುಗಳಲ್ಲಿ ಯಾವುದಾದರೂ ಒಂದು ಪಕ್ಕೆಲುಬು ಉರಿಯೂತಕ್ಕೆ ಒಳಗಾದಲ್ಲಿ ಆ ಭಾಗದಲ್ಲಿ ಅತಿಯಾದ ನೋವಿರುತ್ತದೆ. ಆ ಭಾಗ ಕೆಂಪಾಗಿ ಸ್ವಲ್ಪ ಊತವೂ ಇರಬಹುದು. ಕೈಯಿಂದ ಅಮುಕಿದಾಗ ರೋಗಿಗೆ ಒಮ್ಮೆಗೆ ಪ್ರಾಣಹಿಂಡಿದಷ್ಟು ನೋವಾಗಬಹುದು. ನೋವು ನಿವಾರಕ ಮಾತ್ರೆ ಸೇವಿಸಿದಲ್ಲಿ ರೋಗಿಗೆ ಸ್ವಲ್ಪ ಆರಾಮೆನಿಸುತ್ತದೆ. ನೋವು ಕಡಿಮೆ ಮಾಡಲು ತಿಕ್ಕುವ ಔಷಧ (ಮುಲಾಮು)ವನ್ನು ಆ ಜಾಗಕ್ಕೆ ಬಳಸಬಹುದು.

4. ಹೃದಯಕ್ಕೆ ಸಂಬಂಧಿಸಿದ್ದು : ಕೆಲವೊಂದು ಹೃದಯ ರೋಗಗಳಲ್ಲಿ ಹೃದಯದ ಸ್ನಾಯುಗಳಿಗೆ ರಕ್ತ ಸರಬರಾಜು ಕ್ಷಣ ಕಾಲ ಕಡಿಮೆಯಾಗಬಹುದು. ಇದನ್ನು ಆಂಜೈನಾ (Angina) ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿ ಎದೆನೋವು ಕಾಣಿಸಿಕೊಳ್ಳುತ್ತದೆ. ಎದೆಯ ಎಡಭಾಗದಲ್ಲಿ ನೋವಿದ್ದು, ನೋವು ಜಾಸ್ತಿ ಕೆಲಸ,

ಶ್ರಮದಿಂದ ಜಾಸ್ತಿಯಾಗುತ್ತದೆ. ವಿಶ್ರಾಂತಿಯಿಂದ ನೋವು ಕಡಿಮೆಯಾಗುತ್ತದೆ. ನೋವು ಕೆಲವೊಮ್ಮೆ ಎಡಭುಜ ಎಡತೋಳಿನ ಒಳಭಾಗ, ಎಡಭಾಗದ ಕುತ್ತಿಗೆ, ಬೆನ್ನಿಗೆ ಸಹ ಹರಡಬಹುದು. ವ್ಯಕ್ತಿ ಪೂರ್ಣ ವಿಶ್ರಾಂತಿ ಪಡೆದಲ್ಲಿ ಸಾಮಾನ್ಯವಾಗಿ ಅರ್ಧ (½) ಗಂಟೆಯೊಳಗೆ 'ಆಂಜೈನಾ' ನೋವು ಕಡಿಮೆಯಾಗುತ್ತದೆ.

ಹೃದಯದ ಕೆಲಭಾಗ ಸ್ನಾಯುಗಳಿಗೆ ರಕ್ತ ಸರಬರಾಜು ಪೂರ್ತಿಯಾಗಿ ನಿಂತುಹೋದಾಗ 'ಹೃದಯಾಘಾತ'ದ ನೋವು ಉಂಟಾಗುತ್ತದೆ. ಜಾಸ್ತಿ ಪ್ರಮಾಣದ ಸ್ನಾಯುಗಳಿಗೆ ಒಮ್ಮೆಗೆ ಹಾನಿ ಸಂಭವಿಸಿದರೆ ವ್ಯಕ್ತಿ ಪ್ರಾಣವನ್ನೇ ಕಳೆದುಕೊಳ್ಳಬೇಕಾಗ ಬಹುದು. ಹೃದಯಾಘಾತದ ನೋವು ಅತ್ಯಂತ ತೀವ್ರವಾಗಿರುತ್ತದೆ. ವ್ಯಕ್ತಿಗೆ ಎಡಭಾಗದ ಎದೆಯಲ್ಲಿ ಭಾರವಾದ ವಸ್ತುವಿನಿಂದ ಹೊಡೆದಂತೆ, ಗುದ್ದಿದಂತೆ, ಬಾಣದಿಂದ ತಿವಿದಂತೆ ಭಾಸವಾಗಬಹುದು. ವ್ಯಕ್ತಿ ಎದೆಯನ್ನು ಕೈಯಲ್ಲಿ ಹಿಡಿದುಕೊಂಡು ತೀವ್ರ ಸಂಕಟ ಪಡುತ್ತಿರಬಹುದು. ವಿಪರೀತ ಬೆವರು ಬರಬಹುದು. ಹೃದಯ ಜಾಸ್ತಿ ಬಡಿದುಕೊಳ್ಳಬಹುದು. ಅತಿಯಾದ ಭಯ, ಗಾಬರಿ ವ್ಯಕ್ತಿಯ ಮುಖದಲ್ಲಿ ಎದ್ದು ಕಾಣಬಹುದು. ಹೃದಯಾಘಾತದ ನೋವು ಆಂಜೈನಾದ ನೋವಿನಂತೆ ಅರ್ಧ ಗಂಟೆಯೊಳಗೆ ಕಡಿಮೆಯಾಗದೆ ನೋವು ಮುಂದುವರೆಯುತ್ತಾ ಹೋಗುತ್ತದೆ. ಇಂತಹ ವ್ಯಕ್ತಿಯನ್ನು ಆದಷ್ಟು ಬೇಗನೆ ತಜ್ಞ ವೈದ್ಯರಿರುವ ಆಸ್ಪತ್ರೆಗೆ ಒಯ್ಯಬೇಕು. ತಜ್ಞ ವೈದ್ಯರ ನೆರಳಿನಲ್ಲಿಯೇ ಅತ್ಯಂತ ಚುರುಕಾಗಿ, ಯೋಗ್ಯವಾದ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ವ್ಯಕ್ತಿ ನಡೆಯ ಬಾರದು, ಓಡಾಡಬಾರದು ಪೂರ್ಣ ವಿಶ್ರಾಂತಿಯಲ್ಲಿರಬೇಕು..

ಹೃದಯದ ನೋವಿನ ಶಂಕೆಯಲ್ಲಿರುವ ವ್ಯಕ್ತಿಗಳು ತಜ್ಞ ವೈದ್ಯರನ್ನು ಕಂಡು ಅವರ ಸಲಹೆಗೆ ಅನುಗುಣವಾಗಿ ನಡೆಯಬೇಕು ಅತಿಯಾಗಿ ಬೊಜ್ಜು ಇರುವವರು, ಡಯಾಬಿಟೀಸ್ (ಸಿಹಿಮೂತ್ರ ರೋಗ), ಜಾಸ್ತಿ ರಕ್ತದೊತ್ತಡ, ಇರುವವರಲ್ಲಿ ಎದೆನೋವು ಕಾಣಿಸಿಕೊಂಡರೆ ಅಂತವರು ತಜ್ಞ ವೈದ್ಯರಿಂದ ಹೃದಯದ ತೊಂದರೆಯಿದೆಯೆ? ಎಂಬುದರ ಬಗ್ಗೆ ಪರೀಕ್ಷಿಸಿಕೊಳ್ಳುವುದು ಕ್ಷೇಮ.

5. ಇನ್ನಿತರ ಕಾರಣಗಳು : ಎದೆಯ ಭಾಗದ ಚರ್ಮಕ್ಕೆ ಸಂಬಂಧಿಸಿದ ತೊಂದರೆಗಳು. ಎದೆಯ ಭಾಗದ ಸರ್ಪಸುತ್ತು (Herpes), ಸ್ತ್ರೀಯರಲ್ಲಿ ಸ್ತನಗಳಿಗೆ ಸಂಬಂಧಿಸಿದ ತೊಂದರೆಗಳು ಇತ್ಯಾದಿ ಸಹ ಎದೆನೋವಿಗೆ ಕಾರಣವಾಗಬಹುದು.

ಕೆಲವೊಮ್ಮೆ ಯಾವುದೇ ತೊಂದರೆಯಿಲ್ಲದಿದ್ದರು ಸಹ ಅನವಶ್ಯಕವಾಗಿ ವ್ಯಕ್ತಿ ತನಗೆ ಯಾವುದೋ ದೊಡ್ಡ ಖಾಯಿಲೆಯಿದೆ, ಹೃದಯದ ತೊಂದರೆಯಿದೆ ಅಂತ ಕೊರಗಬಹುದು. ಈ ರೀತಿಯ ಅತಿಯಾದ ಉದ್ವೇಗ, ಆತಂಕ, ಚಿಂತೆ ಸಹ ಎದೆನೋವಿಗೆ ಕಾರಣವಾಗ ಬಹುದು. ಎದೆನೋವು ನಿಮ್ಮನ್ನು ಸಮಸ್ಯೆಯಾಗಿ ಕಾಡುತ್ತಿದ್ದಲ್ಲಿ ತಜ್ಞ ವೈದ್ಯರನ್ನು ಕಂಡು ಅವರ ಸಲಹೆಗನುಗುಣವಾಗಿ ನಡೆಯಿರಿ.

ಡಾ. ಪ್ರವೀಣ ಎಸ್. ಎಸ್.
M.B.B.S., M.D. (OBG), D.N.B., ಕೇರಳ

ಕಿರಿಯರ ಪೋಷಣೆಯಲ್ಲಿ ಹಿರಿಯರ ಪಾತ್ರ

೧. ಮಕ್ಕಳಿಂದ ಒಳಿತನ್ನು ಬಯಸಲು ಅಪೇಕ್ಷಿಸುವುದೆಂದರೆ ಹಿರಿಯರು ಪ್ರತಿರೂಪವಾಗಿರಬೇಕು.
೨. ಒಳ್ಳೆಯ ನಡೆ ನುಡಿಗಳೆ ಮಕ್ಕಳು ಆದರ್ಶರಾಗಲು ಅಡಿಪಾಯಗಳೆಂಬುದನ್ನು ಹಿರಿಯರು ನೆನಪಿಸಿಕೊಳ್ಳಬೇಕು.
೩. ಮಕ್ಕಳಲ್ಲಿ ಸುಪ್ತವಾಗಿರುವ ವಿದ್ವತ್ತನ್ನು ಅಪರೋಕ್ಷವಾಗಿ ಗುರುತಿಸಿಕೊಂಡು ಪರೋಕ್ಷವಾಗಿ ಪ್ರೇರೇಪಿಸಬೇಕು.
೪. ಮಕ್ಕಳು ಅನುಚಿತವಾಗಿ ವರ್ತಿಸದಂತೆ ನೋಡಿಕೊಳ್ಳುವುದೇ ವೇದ್ಯ. ಒರೆದಾರಿ ಹಿಡಿದರೆ ನೇರ ಪಥಕ್ಕೆಳೆಯುವುದು ಕಷ್ಟ ಸಾಧ್ಯ.
೫. ಹಿರಿಯರಿಗೆ ನಾಚಿಕೆ ಕಿರಿಯರಿಗೆ ಹೆದರಿಕೆ ಅಗತ್ಯ.
೬. ಮಗು ಬಲಹೀನನಾದರೂ ಬುದ್ಧಿಹೀನನಾಗಬಾರದು. ಅಂಗಹೀನನಾದರೂ ಗುಣಹೀನನಾಗಬಾರದು.
೭. ಕಾಡು ಭಸ್ಮ ಮಾಡಲು ಒಂದು ಕಿಡಿ ಸಾಕು, ನಾಡು ಕೆಡಲು ಒಬ್ಬ ದುಷ್ಟ ಸಾಕು.
೮. ಮಗುವಿಗೆ ನಿಲುಕುವ ಮನೆಕೆಲಸದಲ್ಲಿ ಮಗುವನ್ನು ತೊಡಗಿಸಿಕೊಳ್ಳಬೇಕು.
೯. ಮಗುವಿಗೆ ಹಸಿವು ತೃಷೆ ನಲಿವುಗಳಷ್ಟೆ ಅಗತ್ಯವಾದುದು ಜ್ಞಾನಾರ್ಜನೆ.
೧೦. ಮಕ್ಕಳು ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವುದನ್ನು ನಿರ್ಲಕ್ಷಿಸಬಾರದು.
೧೧. ಮಕ್ಕಳಲ್ಲಿರುವ ಯಾವುದೇ ದೋಷವನ್ನು ಕಿರಿದೆಂದು ಕಡೆಗಣಿಸಬಾರದು.
೧೨. ವ್ಯರ್ಥ ಕಾಲಹರಣ ಮಾಡುವ ಮಕ್ಕಳು ಮನೆತನದ ಸೂಕ್ತ ಭವಿಷ್ಯದ ಪತನಕ್ಕೆ ಕಾರಣರು.
೧೩. ಬಿಳಿಯ ಹಾಳೆಯಂತಹ ಮನಸ್ಸು ಮಕ್ಕಳದು ಅದರಲ್ಲಿ ಒಳಿತನ್ನು ಬರೆಯುವ ಬಲವಾಗಬೇಕು ಹಿರಿಯರು.
೧೪. ಮಾತ ಪಿತೃಗಳ ವಾತ್ಸಲ್ಯ ಬಹು ಸೂಕ್ಷ್ಮವಾಗಿಯೂ ಗಂಭೀರವಾಗಿಯೂ ಇರಬೇಕು.
೧೫. ವಿವೇಕವಿಲ್ಲದ ಅದೃಷ್ಟ, ತೂತುಗಳಿರುವ ಚೀಲದಂತೆ.

ಕೆದಂಬಾಡಿ ಪುಷ್ಪಾ ತಿಮ್ಮಯ್ಯ
ಕುಂದಚೇರಿ, ಚೆಟ್ಟಿಮಾನಿ

ಸಂಸ್ಕೃತಿ ಹೆಚ್ಚಾಗಿ ಮೂಡಿ ಬರಲಿ

ಸಂಗಾತಿ ಪತ್ರಿಕೆಯಲ್ಲಿ ಗೌಡರ ಸಮಸ್ಯೆಗಳು, ಗೌಡರ ಕಾರ್ಯಕಲಾಪದ ಬಗ್ಗೆ, ಗೌಡರ ಚರಿತ್ರೆಗಳು, ಗೌಡರ ಸಂಸ್ಕೃತಿ, ಗೌಡ ವ್ಯಕ್ತಿಗಳ ಪರಿಚಯ ಸಮಾಜದ ಕುಂದು ಕೊರತೆಗಳು ಹೆಚ್ಚಾಗಿ ಮೂಡಿ ಬರಲಿ

ಪ್ರೊ. ಪೂಜಾರಿ ಮೊಣ್ಣಪ್ಪ, ಬೆಂಗಳೂರು

"ಬೆಸುಗೆ"

ಈಗ್ಗೆ ಸುಮಾರು ಮುವ್ವತ್ತು ವರುಷಗಳ ಹಿಂದೆ ಬೆಂಗಳೂರಿನಲ್ಲಿ ಕೊಡಗು ಮತ್ತು ದ. ಕನ್ನಡ ಗೌಡ ಸಮಾಜ ಒಂದೇ ಆಗಿತ್ತು ಎಂದು ಕೇಳಿದ್ದೆ. ತಮ್ಮ ತಮ್ಮೊಳಗಿನ ಮೇಲು, ಕೀಳು ಭಾವನೆ ಕೆಲವು ಕಿಡಿಗೇಡಿಗಳ ಮನದಾಳದಲ್ಲಿ ಮೂಡಿ, ಮೊಳಕೆಯೊಡೆದು ಚಿಗುರಿದಾಗ ಈ ಸಮಾಜ ಒಡೆದು ಹೋಳಾಯಿತು. ಅಲ್ಲಿಂದೀಚೆಗೆ ತೀರ ಹತ್ತಿರದ ಸಂಬಂಧವಿರುವ ಕೊಡಗಿನ ಗೌಡರು ಎರಡೂ ಸಮಾಜಗಳಿಗೆ ಎಡತಾಕುತ್ತಿದ್ದಾರೆ.

ತೀರ ಇತ್ತೀಚೆಗೆ ಅಂದರೆ 1998ರಿಂದ ಜನಾಂಗದ ಒಗ್ಗಟ್ಟಿನ ಕಳಕಳಿ ಇರುವಂತ ಅಮ್ಮಾಜೀರ ಪೊನ್ನಪ್ಪ, ಯುವಕ ಸಂಘದ ಸದಸ್ಯರುಗಳು ಹಾಗು ತೆಕ್ಕಡೆ ಕಾವೇರಿಯಪ್ಪನಂತಹವರ ಪ್ರಯತ್ನದ ಫಲವಾಗಿ ಮತ್ತೆ ಒಗ್ಗೂಡುವ ಲಕ್ಷಣಗಳಿದ್ದು (ಸಾಮಾನ್ಯ ಜನತೆ ಮಾತ್ರ) ಕೊಡಗು ಮತ್ತು ದ. ಕನ್ನಡ ಗೌಡ ಸಮಾಜ ಎಂಬ ಶೀರ್ಷಿಕೆ ಹೊತ್ತ ಆಮಂತ್ರಣ ಪತ್ರಿಕೆ ಕೊಡಗು ಸಂಗಾತಿಯಲ್ಲಿ ಬರುತ್ತಿದೆ. ಸಂತೋಷದಿಂದ ಸಮಾರಂಭಕ್ಕೆ ಭೇಟಿ ಕೊಟ್ಟಾಗ ತಿಳಿಯಿತು, ಒಂದಾದದ್ದು ಕೇವಲ ಬ್ಯಾನರ್‌ನಲ್ಲಿ ಎಂದು. ಬಲೂನ್‌ಗೆ ಸೂಜಿ ಚುಚ್ಚಿದಂತಾಯಿತು. ಕೇವಲ ಬೆರಳೆಣಿಕೆಯಷ್ಟೇ ಜನ ಒಂದಾಗಿದ್ದಾರೆ. 1998ಕ್ಕಿಂತ ಈ ವರ್ಷ ಅಂದರೆ 1999ರಲ್ಲಿ ಹೆಚ್ಚು ಜನರು ಬಂದಿದ್ದರು. ಇದು ಜನತೆಯ ಒಲವು ಒಂದೇ ಸಮಾಜವಾಗುವುದರತ್ತ ಇದೆ ಎಂದು ತೋರಿಸುತ್ತದೆ. ಆದರೂ ಸಾಮಾನ್ಯ ಜನತೆಯ ಸ್ಥಿತಿ ಎರಡು ದೋಣಿಯಲ್ಲಿ ಕಾಲಿಟ್ಟಂತಾಗಿದೆ.

ನಮ್ಮ ಸಮಾಜಕ್ಕೆ ಕೊಡಗು ಗೌಡ ಸಮಾಜದವರು ಸೇರಲಿ ಎಂದು ದ. ಕನ್ನಡದವರು ಆಶಿಸಿದರೆ, ಬೇಕಾದರೆ ! ಅವರೇ ಬಂದು ಸೇರಿಕೊಳ್ಳಲಿ ಎಂದು ಕೊಡಗಿನ ಗೌಡ ಸಮಾಜದವರು ಪ್ರತಿಷ್ಠೆಯನ್ನು ಮುಂದಿಡುತ್ತಾರೆ. ನಾವು ಕಷ್ಟಪಟ್ಟು, ಹುಟ್ಟು ಹಾಕಿದ ಸಮಾಜವನ್ನು ಅಷ್ಟು ಸುಲಭವಾಗಿ ಅವರಿಗೆ ಬಿಟ್ಟು ಕೊಡುವುದೆ? ಎನ್ನುತ್ತಾರೆ. ಮನಕರಗುವಂತ ದೃಷ್ಟಾಂತವನ್ನು ಕೊಡುತ್ತಾರೆ. ಕೊಡಗು ಗೌಡ ಸಮಾಜದವರು.

ಎರಡು ಗೌಡ ಸಮಾಜದವರು (ಮುಖಂಡರುಗಳು) ಕಲೆತು ಮಾತಾಡಲಿ. ಇದು ಪ್ರತಿಷ್ಠೆಯನ್ನು ತೋರಿಸುವ ಕಾಲವಲ್ಲ. ಪ್ರತಿಭೆಯನ್ನು ಮೆರೆಸುವ ಕಾಲ. ನಿಮ್ಮ ಮನೆಯಲ್ಲಿ ಹುಟ್ಟಿದ ಮುದ್ದಿನ ಮಗಳನ್ನು ಸಾಕಿ ಸಲುಹಿ ಬೇರೆ ಮನೆಗೆ ಕಳುಹಿಸುವುದಿಲ್ಲವೆ? ಆಗಲೂ ನಿಮಗೆ ನೋವಾಗುತ್ತದೆ ಎಂದು ಮಗಳನ್ನು ಮನೆಯಲ್ಲಿಯೇ ಇಟ್ಟುಕೊಳ್ಳುತ್ತೀರಾ? ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಪಂಚತಂತ್ರದ ನೀತಿ ಕತೆಯನ್ನು ಮರೆಯದಿರಿ. ನಿಮ್ಮಲ್ಲಿ ಒಗ್ಗಟ್ಟಿದ್ದರೆ ಹೊರಗಿನವರು ನಿಮ್ಮನ್ನು ಗೌರವಿಸುತ್ತಾರೆ, ಆದರಿಸುತ್ತಾರೆ. ನಿಮ್ಮಿಂದ ಸಲಹೆಗಳನ್ನು ಬಯಸುತ್ತಾರೆ. ಇಲ್ಲದಿದಲ್ಲಿ ಅನ್ಯರ ನಗೆಪಾಟಲಿಗೆ ಗುರಿಯಾಗ ಬೇಕಾದೀತು.

ಇಂದು ಪ್ರತಿಯೊಬ್ಬ ಗೌಡರು ಒಂದಿಲ್ಲೊಂದು ಪ್ರತಿಭೆಯಲ್ಲಿ ಮುಂದಿದ್ದಾರೆ. ಯಾರು ಮೇಲಲ್ಲ ಯಾರು ಕೀಳಲ್ಲ. ಎರಡೂ ಕಡೆಯೂ ಉತ್ತಮ ಹಿರಿಯರ ಮಾರ್ಗದರ್ಶಕರಿದ್ದಾರೆ. ಬೆಂಗಳೂರಿನ ಅರೆಭಾಷೆ ಗೌಡ ಜನತೆ ಆಶಿಸುವುದು, ಒಮ್ಮನಸ್ಸಿನಿಂದ ಬಯಸುವುದು ಒಂದಾದ ಬಲಿಷ್ಠ ಸಮಾಜವನ್ನು. ಇಂದು ನಾವು ಒಂದಾದರೆ, ನಾಳೆ ನಮ್ಮ ಮಕ್ಕಳು ಮರಿಗಳು, ಉತ್ತಮ ರೀತಿಯ ಸಹಬಾಳ್ವೆ ಬಾಳುವುದು. ನಾವು ಹಾಕಿದ ಬುನಾದಿ (ಫೌಂಡೇಶನ್) ಭದ್ರವಿಲ್ಲದೇ ಹೋದರೆ ನಾಳೆ ಮನೆಯದೇನು ತಪ್ಪಿಲ್ಲ ಅಲ್ಲವೆ? ಇಂದು ನಾವು ಬೇವಿನ ಬೀಜವನ್ನು ಬಿತ್ತಿ ನಾಳೆ ಅದರಿಂದ ಸಿಹಿ ಫಲವನ್ನು ಬಯಸಲು ಸಾಧ್ಯವೇ? ಆದ್ದರಿಂದ ಇಂದು ನಾವು ಮಾವಿನ ಬೀಜವನ್ನೇ ಬಿತ್ತೋಣ. ಅದರಿಂದ ಬಂದು ಸಿಹಿ ಫಲವನ್ನು ನಮ್ಮ ಪೀಳಿಗೆಯವರು ಸವಿಯಲಿ. ನಾವಂತು ಅನುಭವಿಸಲು ನಾಳೆ ಇರುವುದಿಲ್ಲ. ಒಂದು ಸಮಾಜದಲ್ಲಿ ಒಗ್ಗಟ್ಟು ಸಾಧಿಸದವರು ದೇಶದ ಒಗ್ಗಟ್ಟು ಸಾಧಿಸುವರೆ? ಕಾಯುವರೆ? ದ್ವೇಷ, ಕ್ಲೇಶ, ಮೇಲು, ಕೀಳು ಭಾವನೆಯನ್ನು ಬದಿಗೊತ್ತಿ ಒಂದು ಬಲಿಷ್ಠ ಸಮಾಜವನ್ನು ಕಟ್ಟುವತ್ತ ಮನಹರಿಸಿ, ಎರಡು ಸಮಾಜಗಳನ್ನು **ಬೆಸುಗೆ** ಹಾಕಿ ಮೇಲ್ಪಂಕ್ತಿಯಲ್ಲಿ ನಿಲ್ಲಬಹುದೆ?

ಇಂದು ಈ ಸಮಾಜಗಳನ್ನು ಬೆಸುಗೆ ಹಾಕುವ ಕಾರ್ಯದಲ್ಲಿ ಪ್ರವೃತ್ತರಾದವರಿಗೆ ಗೌರವಿಸಿ, ಸಂಪೂರ್ಣ ಜಯಶೀಲರಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಇಂತಹ ಲೇಖನಗಳನ್ನು ಆಹ್ವಾನಿಸಿ, ಜನಮನ ಮುಟ್ಟುವಂತೆ, ನಮ್ಮ ಗೌಡ ಸಮಾಜಗಳ ತಪ್ಪು ತಿಳುವಳಿಕೆಗಳನ್ನು ದೂರ ಮಾಡಿ, ಸಮಸ್ತ ಅರೆಭಾಷೆ ತುಳುಭಾಷೆ, ಗೌಡರನ್ನು ಜಾಗೃತಗೊಳಿಸಿ ಬೆಸುಗೆ ಹಾಕಲು ಪ್ರಯತ್ನಿಸುತ್ತಿರುವ ಪಟ್ಟಡ ಪ್ರಭಾಕರ ದಂಪತಿಗಳನ್ನು ಕುಲದೇವರು ವೆಂಕಟರಮಣ, ಇಗ್ಗುತಪ್ಪ, ಕಾವೇರಮ್ಮ ಸದಾ ಕಾಯಲಿ ಎಂದು ಪ್ರಾರ್ಥಿಸುತ್ತೇನೆ. ಬೆಸುಗೆ ಕಾರ್ಯದಲ್ಲಿ ಗರುಡಗಂಭದಂತೆ ನಿಂತ ಕೊಡಗು ಸಂಗಾತಿ ಪತ್ರಿಕೆ ಚಿರಾಯುವಾಗಲಿ. ಇಂತಹ ಉತ್ತಮ ಮಾಧ್ಯಮಕ್ಕೆ ಅಬಾಲ ವೃದ್ಧರ ಬೆಂಬಲ ಸದಾ ಹಸಿರಾಗಿರಲಿ. ಅರೆಭಾಷೆ ಗೌಡರ ಕೀರ್ತಿ ಹಿಮಾಲಯದುದ್ದಕ್ಕೂ ಹರಡಿ ಮೇರುವಿನೆತ್ತರಕ್ಕೆ ಏರಲಿ ಎಂದು ಹಾರೈಸುವ,

ಬಿಟ್ಟೀರ ಚೋಂದಮ್ಮ ಶಂಭು

ನನ್ನ ಸಂಗಾತಿ

ಓ ನನ್ನ ಸಂಗಾತಿಯೇ
ನೀ ಎಲ್ಲಿರುವೆ
ನಿನಗಾಗಿ ನಾ ಹುಡುಕಾಡಿದೆ
ಅಲ್ಲಿ ಇಲ್ಲಿ ಎಲ್ಲೆಲ್ಲೋ
ಕೊನೆಗೂ ನೀ ಸಿಗಲಿಲ್ಲಾ ಎನಗೇ
ನಾ ವಿರಹಿಯಾದೆ
ವಿರಹ ಮರೆಯಲೆಂದೆ
ಕೊನೆಗೂ ಹುಡುಕಿ ತಂದೆ
ನನ್ನ ಸಂಗಾತಿಯಾ
ನನ್ನ ಪ್ರೀತಿಯಾ "ಕೊಡಗು ಸಂಗಾತಿ"ಯಾ

ಎಡಿಕೇರಿ ಜಿ. ಜಗನ್ನಾಥ್, ಬಲ್ಲಮಾವಟಿ

ನಮ್ಮ ಲೇಖಕರ ಪರಿಚಯ



ಎಡಿಕೇರಿ ಸುದರ್ಶನ, ಬೆಂಗಳೂರು

ಶ್ರೀ ಸುದರ್ಶನ್‌ರವರು ಪಾಲೂರು ಗ್ರಾಮದ ದಿ. ಎಡಿಕೇರಿ ಸುಬ್ರಾಯ ಹಾಗೂ ಕುಂಜಿಲನ ರಾಧರವರ ಏಕೈಕ ಪುತ್ರ. ಇವರ ಜನನ 1973ರಲ್ಲಿ ಬೆಂಗಳೂರಿನಲ್ಲಿ ಆಯಿತು. ತಂದೆ ಸುಬ್ರಾಯನವರು ಮೈಕೋ ಕಾರ್ಖಾನೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು ಅನಾರೋಗ್ಯದ ಕಾರಣ ರಾಜೀನಾಮೆ ನೀಡಿದರು. ತಾಯಿ ರಾಧರವರು ಬಿ.ಹೆಚ್.ಇ.ಎಲ್.ನಲ್ಲಿ ರಿಸೆಪ್ಷನಿಸ್ಟ್ ಕೆಲಸ ನಿರ್ವಹಿಸಿಕೊಂಡಿದ್ದಾರೆ. ಸುದರ್ಶನ್‌ರ ಒಬ್ಬಳೇ ತಂಗಿ ಎಡಿಕೇರಿ ಭಾರತಿ, ಸರ್ಕಾರಿ ಯುನಾನಿ ವೈದ್ಯಕೀಯ ಕಾಲೇಜಿನಲ್ಲಿ ಕೊನೆಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ.

ಪ್ರೈಮರಿ ಶಾಲೆಯಲ್ಲಿದ್ದಾಗ ಸುದರ್ಶನ್ ಬರೆದ ಕತೆಯೊಂದು ಟಿಂಕಲ್ ಕಾಮಿಕ್ಸ್‌ನಲ್ಲಿ ಪ್ರಕಟಗೊಂಡಾಗ ಪ್ರೋತ್ಸಾಹಿತಗೊಂಡು ಆಗಿನಿಂದ ಕಥಾರಚನೆಯಲ್ಲಿ ಇವರ ಒಲವು ಹೆಚ್ಚಾಯಿತು. ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದು ಕೊಂಡ ಸುದರ್ಶನ್ ಜೊತೆ ಜೊತೆಗೆ ಕಂಪ್ಯೂಟರ್ಸ್ ಕನ್ನಡ, ಇಂಗ್ಲೀಷ್ ಟೈಪಿಂಗ್ ಹಾಗೂ ಆಂಗ್ಲ ಶೀಘ್ರಲಿಪಿ ಸೀನಿಯರ್ ಪರೀಕ್ಷೆಗಳನ್ನು ಉತ್ತಮ ಶ್ರೇಣಿಯಲ್ಲಿ ಪಾಸ್ ಮಾಡಿಕೊಂಡರು. ಕಾಲೇಜಿನಲ್ಲಿದ್ದಾಗ ಇವರಿಗೆ ಅತ್ಯುತ್ತಮ ಚಿತ್ರರಚನೆಗೆ, ಪಿಕ್ ಅಂಡ್ ಸ್ಪೀಕ್, ನಾಟಕ ಏಕಪಾತ್ರಾಭಿನಯ ಹಾಗೂ ಮೂಕಾಭಿನಯ ಗಳಲ್ಲಿ ಸತತವಾಗಿ ಬಹುಮಾನಗಳು ದೊರೆತಿವೆ.

ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಂಗಳೂರಿನ ಜಸ್ಮಾ ಭವನದಲ್ಲಿ ನಡೆದ ಕೊಡಗು ಹಾಗೂ ದ. ಕನ್ನಡ ಗೌಡ ಸಮಾಜದ ಕೈಲ್ ಮುಹೂರ್ತ ಸಂದರ್ಭದಲ್ಲಿ ಶ್ರೀ ಎಡಿಕೇರಿ ಸುದರ್ಶನ್‌ರವರಿಗೆ 'Best Performer Award" ದೊರಕಿತು.

ಈ ನಡುವೆ ಇವರಿಗೆ 'Student Mail' ಪತ್ರಿಕೆಯಲ್ಲಿ 'ಅಸಿಸ್ಟೆಂಟ್ ಎಡಿಟರ್' ಕೆಲಸ ಸಿಕ್ಕಿದ್ದರಿಂದ ಪತ್ರಿಕೋದ್ಯಮದಲ್ಲಿ ಇವರಿಗೆ ಆಸಕ್ತಿ ಬೆಳೆಯುತ್ತಾ ಹೋಯಿತು. ವಿದ್ಯಾರ್ಥಿಗಳಿಗಾಗಿ ಮೀಸಲಾದ ಈ ಪತ್ರಿಕೆಗಾಗಿ ಇವರು WWF ಹೀರೋಗಳನ್ನು, ಈಜುಗಾರ್ತಿ ನಿಶಾ ಮಿಲೆಟ್, ಮಾಜಿ ಮಿಸ್ ಇಂಡಿಯಾ ರುಚಿತಾ ಪ್ರಸಾದ್ ಹಾಗೂ ಸಂಧ್ಯಾ ಚೀಸ್, ಕಾಲೇಜ್ ಪ್ರಾಂಶುಪಾಲರುಗಳು ಹಾಗೂ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಲೇಖನಗಳನ್ನು ಪ್ರಕಟಿಸುವ ಸಂದರ್ಭ ಒದಗಿ ಬಂತು.

ಹಾಲಿ ಇವರು ISRO ಬಾಹ್ಯಾಕಾಶ ಇಲಾಖೆಯ ನಿರ್ದೇಶಕರೊಬ್ಬರ ಪರ್ಸನಲ್ ಸೆಕ್ರೆಟರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಬಿಡುವಿನ ವೇಳೆಯಲ್ಲಿ ಸಣ್ಣ ಪುಟ್ಟ ಲೇಖನಗಳನ್ನು ಬರೆಯುವುದು ಇವರ ಹವ್ಯಾಸ. ಇವರು ಬರೆದಿರುವ ಹಲವಾರು ಸಣ್ಣ ಪುಟ್ಟ ಲೇಖನಗಳು ಹಾಗೂ ವ್ಯಂಗ್ಯಚಿತ್ರಗಳು Times of Indiaದಲ್ಲಿ ಪ್ರಕಟಗೊಂಡಿವೆ. ISROನಲ್ಲಿ ನಡೆದ 1999ನೇ ಸಾಲಿನ ಹಿಂದಿ ಕಥಾರಚನೆ ಸ್ಪರ್ಧೆಯಲ್ಲಿ ಇವರಿಗೆ ಪ್ರಥಮ ಬಹುಮಾನ ಬಂದಿರುವುದು ಗಮನಾರ್ಹ.

ಇಷ್ಟಲ್ಲದೆ ಸುದರ್ಶನ್‌ರವರು ಕರಾಟೆಯಲ್ಲಿ Black Belt ಪಡೆದಿದ್ದಾರೆ. 1992ನೇ ಇಸವಿಯಿಂದ ಇವರು ಕರಾಟೆಯನ್ನು ಅಭ್ಯಾಸ ಮಾಡುತ್ತಿದ್ದು ಈಗಲೂ ಬಿಡುವಿನ ವೇಳೆಯಲ್ಲಿ ಕರಾಟೆ ತರಬೇತಿ ನೀಡುತ್ತಾರೆ. 1995ರಲ್ಲಿ ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗಿಟ್ಟಿಸಿ ಕೊಂಡಿರುವುದು ಇವರ ಅತ್ಯುತ್ತಮ ಹೆಗ್ಗಳಿಕೆ. ತನ್ನ ಎಲ್ಲಾ ಸಾಧನೆಗಳಿಗೆ ತನ್ನ ತಾಯಿಯ ಪ್ರೋತ್ಸಾಹವೇ ಕಾರಣ ಎಂದು ಸುದರ್ಶನ್ ಹೆಮ್ಮೆಯಿಂದ ಹೇಳುತ್ತಾರೆ. "ಎಲ್ಲಾ ಮಕ್ಕಳಿಗೆ ಭಗವಂತ ಒಂದಲ್ಲ ಒಂದು ಪ್ರತಿಭೆಯನ್ನು ದಯಪಾಲಿಸಿರುತ್ತಾನೆ. ಆ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ ಅದನ್ನು ಬೆಳೆಯುವುದಕ್ಕೆ ಎಡೆ ಮಾಡಿಕೊಡಬೇಕಾದುದು ತಂದೆ ತಾಯಿಯರ ಕರ್ತವ್ಯ" ಎಂದು ಇವರ ನಂಬಿಕೆ.

ಶ್ರೀಯುತರ ಚಿಕ್ಕ ಪ್ರಾಯದಲ್ಲಿಯೇ ಎಲ್ಲಾ ವಿಭಾಗಗಳಲ್ಲೂ ಸಾಕಷ್ಟು ವಿಚಾರವಂತರಾದ ಇವರು ಕೊಡಗು ಸಂಗಾತಿಗೆ ಹಲವಾರು ಕಿರು ಲೇಖನಗಳನ್ನು ಬರೆದು ಈಗಾಗಲೇ ಪರಿಚಿತರಾಗಿದ್ದಾರೆ. ಇವರು ಜೀವನದಲ್ಲಿ ಅತಿ ಮೇಲ್ಪಟ್ಟಕ್ಕೆ ಹೋಗುವ ಲಕ್ಷಣಗಳು ಕಂಡು ಬರುತ್ತಿರುವುದರಿಂದ ಶ್ರೀಯುತರ ಭವಿಷ್ಯವು ಬಹಳಷ್ಟು ಮೇಲ್ಮಟ್ಟಕ್ಕೆ ಹೋಗಿ ನಮ್ಮ ಜನಾಂಗದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿಯುವಲ್ಲಿ ಸಫಲರಾಗಲಿ ಎಂದು ಕುಲದೇವರು ವೆಂಕಟರಮಣನನ್ನು ಹಾಗೂ ವಿದ್ಯಾದೇವತೆ ಶಾರದಾಂಬೆಯನ್ನು ಜನಾಂಗದ ಪರವಾಗಿ ಕೊಡಗು ಸಂಗಾತಿ ಶುಭವನ್ನು ಬಯಸುತ್ತದೆ.

ಪಟ್ಟಡ ಪ್ರಭಾಕರ

"ಕೊಡಗ್ ಸಂಗಾತಿ"ನ ಹೆಂಗೆ ಬೆಳ್ಸುದು

ನಾವೆಲ್ಲಾ 'ಕೊಡ್‌ಗ್ ಸಂಗಾತಿ'ನ ತಕ್ಕಂಡ್ ಓದುತ್ತಾವಳೊ. ಲೇಖನ ಬರೀತಾವಳೊ. ಇಷ್ಟ್ ಮಾಡ್‌ರೆ ಸಾಲ್ದ್. ನಾವ್ ನಮ್ಮ ಸಮ್ಮಂದಿಕರ್‌ಗಳಿಗೆ ಸ.ಈ ಸಂಗಾತಿಗೆ ಚಂದಾದಾರರಾಕುತ ಮನ ಪೊಲ್ಲೊಕು. ನಮ್ಮ ಹೆಣ್ಣ್‌ನ ಕಡೆ ಗಂಡ್‌ನ ಕಡೆ ನೆಂಟ್ರ್‌ಗಳಿಗೆ ಇದರ್‍ನ ಪರಿಚಯಿಸಿ ಪ್ರೋತ್ಸಾಹ ನೀಡಕು. ಈ ಸಂಗಾತಿ ಪಟ್ಟಡ ಪ್ರಭಾಕರ್‌ಂದ್ ಅಲ್ಲ! ಈ ಪತ್ರಿಕೆ ಜನಾಂಗದ್! ಜನಾಂಗ ಇರ್‌ದ್ಂದ ಪತ್ರಿಕೆ ನಡೀತಾಟ್ಟು! ಸಂಪಾದಕರ್ ಅದರ್‍ನ ನಡ್ಸವು ಮಾತ್ರ! ಆದರ್‌ಂದ ಮಾಜನ ಗ್ಯಾನ ಮಾಡಕು ನಮ್ಮನ ನಾವೇ ಸಂಗಾತಿಗಾಗಿ ತೊಡ್‌ಗಿಸಿಕ್ಕಣಕುತ!

ಗುಡ್ಡೆ ಮನೆ ರಮೇಶ್, ಮಡಿಕೇರಿ

ಮಹಾಭಾರತದ ಯುದ್ಧದ ಕಾಲ ಹೇಳುವ ಐಹೊಳೆಯ ಶಿಲಾಶಾಸನಗಳು

ಪ್ರಾಚೀನ ವಾಸ್ತುಶಿಲ್ಪದ ವೈವಿಧ್ಯಮಯ ಕುರುಹುಗಳಿಗಾಗಿ ಐಹೊಳೆ ಜಗತ್ಪ್ರಸಿದ್ಧವಿದ್ದರೂ ಅಲ್ಲಿರುವ ಅನೇಕಾನೇಕ ಶಿಲಾ ಶಾಸನಗಳು ಕರ್ನಾಟಕದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆಂಬ ಸಂಗತಿ ಅನೇಕರಿಗೆ ತಿಳಿಯದು. ಐಹೊಳೆಯಲ್ಲಿ ಸುಮಾರು ಅರುವತ್ತು ಚಿಕ್ಕ, ದೊಡ್ಡ ಶಾಸನಗಳಿವೆ. ಕ್ರಿ. ಶ. 7ನೇ ಶತಮಾನದಿಂದ ಕ್ರಿ. ಶ. 16ನೇ ಶತಮಾನದವರೆಗಿನ ಬೇರೆ ಬೇರೆ ಕಾಲದಲ್ಲಿ ಈ ಶಾಸನಗಳು ಬರೆಯಲ್ಪಟ್ಟಿವೆ.

ಇಲ್ಲಿಯ ಶಾಸನಗಳಲ್ಲಿ ಐಹೊಳೆಯನ್ನು ಆರ್ಯಪುರ, ಅರ್ಯ ಭಾಷೆ, ಅಯ್ಯವೊಳಲ್, ಅಯ್ಯಾವೊಳೆ ಎಂದು ಉಲ್ಲೇಖಿಸಲಾಗಿದೆ. ಇದನ್ನು ಅಧಿಷ್ಠಾನವೆಂದು ಸಂಬೋಧಿಸಲಾಗಿದೆ. ಚತುರ್ವೇದಗಳಲ್ಲಿ ಪಾರುಗತರಾಗಿದ್ದ, ಯೋಗ್ಯ ಜನರೆಂದು ಆರಿಸಲ್ಪಟ್ಟ ಐನೂರು ಮಹಾ ಜನರು ಪದೇ ಪದೇ ಇಲ್ಲಿನ ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಉದಾ : ಲಾಡಖಾನ ದೇವಾಲಯದ ಗೋಡೆಯ ಮೇಲಿನ ಕ್ರಿ. ಶ. 8ನೇ ಶತಮಾನದ ಈ ಶಾಸನದಲ್ಲಿ 'ಸ್ವಸ್ತಿ ಆಯ್ಯ್ಯಜನ ಅರ್ಯಭಾಷೆ ಸಮುದಯೋದಿತರಾಯ್ಯ್ಯ ಪುರಾಧಿಷ್ಠಾನದಾ ಶ್ರೀ ಮಹಾ ಚತುರ್ವ್ವಿದ್ಯ ಸಮುದಯ ಮೈನೂರ್ವಕ್ಕಂ' ಇತ್ಯಾದಿ.

ಐಹೊಳೆಯಲ್ಲಿ ಈಪರೆಗೆ ದೊರೆತಿರುವ, ಕಾಲ ನಿರ್ಣಯಿಸ ಬಹುದಾದ ಅತಿ ಪ್ರಾಚೀನ ಶಾಸನವೆಂದರೆ ಇಮ್ಮಡಿ ಪುಲಕೇಶಿಯ ಪ್ರಶಸ್ತಿ, ಮೇಗುಟ ದೇವಾಲಯದ ಪೂರ್ವಗೋಡೆಯಲ್ಲಿ ಸೇರಿಸಲಾಗಿರುವ ಈ ಶಿಲಾಶಾಸನ ಕ್ರಿ. ಶ. 7ನೇ ಶತಮಾನದ ಕನ್ನಡ ಲಿಪಿಯಲ್ಲಿ ಸುಂದರವಾಗಿ ಬರೆಯಲ್ಪಟ್ಟಿದೆ. ಸಂಸ್ಕೃತ ಕಾವ್ಯಶೈಲಿಯಲ್ಲಿ 19 ಸಾಲುಗಳಲ್ಲಿ ಇದನ್ನು ಬರೆಯಲಾಗಿದ್ದು, ಕೊನೆಯ ಸಾಲು ಮಾತ್ರ ಸ್ವಲ್ಪ ಅಸ್ಪಷ್ಟವಾಗಿದೆ. ಇದರಕಾಲ ಶಕವರ್ಷ 556, ಅಂದರೆ ಕ್ರಿ. ಶ. 634 ಬಾದಾಮಿ ಚಾಲುಕ್ಯರ ಇತಿಹಾಸದ ಮೇಲೆ ಅಪೂರ್ವ ಬೆಳಕು ಬೀರುವುದು ಈ ಶಾಸನ.

ಬಾದಾಮಿ ಚಾಲುಕ್ಯರ ಇತಿಹಾಸ ಮತ್ತು ಇಮ್ಮಡಿ ಪುಲಿಕೇಶಿಯ ದಿಗ್ವಿಜಯಗಳನ್ನು ಅರಿತುಕೊಳ್ಳಲು ಈ ಶಾಸನ ಮಹತ್ವದ್ದಾಗಿದೆ. ಸಂಸ್ಕೃತ ಕಾವ್ಯದ ಇತಿಹಾಸದ ದೃಷ್ಟಿಯಿಂದ ಕೂಡ ಇದಕ್ಕೆ ಪ್ರಾಮುಖ್ಯತೆಯಿದೆ. ಕಾಳಿದಾಸ ಮತ್ತು ಭಾರವಿ ಇವರು ಕ್ರಿ. ಶ. 634ಕ್ಕಿಂತ ಮುಂಚೆಯೆ ಇದ್ದರೆಂದು ಈ ಶಾಸನ ಸಿದ್ಧಪಡಿಸುತ್ತದೆ. ಶಾರ್ದೂಲ ವಿಕ್ರೀಡಿತೆ, ಉಪಜಾತಿ, ಆರ್ಯಾ, ಔಪಚ್ಛಂದಸಿಕ, ದ್ರುತವಿಲಂಬಿತ, ಮತ್ತೇಭವಿಕ್ರೀಡಿತ, ಇಂದ್ರ ವಜ್ರಾ, ವಸಂತ ತಿಲಕಾ, ಮಾನಿಲೀ, ಸ್ರಗ್ಧರಾ, ಮಂದಾಕ್ರಾಂತಾ ಇತ್ಯಾದಿ ಛಂದಸ್ಸುಗಳ ಬಳಕೆ ಇದರಲ್ಲಿದೆ. ರವಿ ಕೀರ್ತಿಯು ಉತ್ತಮ ಮಟ್ಟದ ಕವಿಯಾಗಿದ್ದನೆಂಬುದಕ್ಕೆ ಇದು ಪುರಾವೆಯಾಗಿದೆ. ಇದರಲ್ಲಿರುವ ವಿವರಗಳ ಪ್ರಕಾರ ಮಹಾಭಾರತ ಯುದ್ಧ ಕ್ರಿ. ಪೂ. 3101ರಲ್ಲಿ ನಡೆಯಿತೆಂದು ತಿಳಿಯುತ್ತದೆ. ಚಾಲುಕ್ಯರ ಇತಿಹಾಸ ತಿಳಿಯಲು ಈ ಶಾಸನ ಭದ್ರ ಬುನಾದಿಯಾಗಿದೆ.

ಇನ್ನು ಕೆಲವು ಶಾಸನಗಳಿಂದ ಪ್ರಾಚೀನ ಕಾಲದ ಸುಂಕಗಳ ಬಗ್ಗೆ ಮಾಹಿತಿ ಪಡೆಯಬಹುದು. ದುರ್ಗದ ಗುಡಿಯ ಮಹಾ ದ್ವಾರದ ಮೇಲಿರುವ ಚಾಲುಕ್ಯ ಇಮ್ಮಡಿ ವಿಕ್ರಮಾದಿತ್ಯನ ಕಾಲದ ಶಾಸನ (ಕ್ರಿ. ಶ. 733-44) ಈ ದೃಷ್ಟಿಯಿಂದ ಮಹತ್ವದ್ದು. ಇದರಲ್ಲಿ ವಡ್ಡರಾಉಳ ಸುಂಕದ ಅತಿ ಪ್ರಾಚೀನ ಉಲ್ಲೇಖನವನ್ನು ಕಾಣುತ್ತೇವೆ. ಇದಲ್ಲದೆ ದುರ್ಗದ ಗುಡಿ ಮಂಟಪದಲ್ಲಿ ಒಂದು ಕಂಬದ ಮೇಲೆ ಜಾತ್ರಕೀಯ ನಾಗರಿ ಅಕ್ಷರಗಳಲ್ಲಿಯ ಶಾಸನ, ಸೂರ್ಯನಾರಾಯಣ ಗುಡಿಯಲ್ಲಿಯ 9ನೆಯ ಶತಮಾನದ, ಹುಚ್ಚೀಮಲ್ಲೀ ಗುಡಿಯ ಹೊರಗೋಡೆಯ ಮೇಲಿನ 7ನೆಯ ಶತಮಾನ, ರಾವಳ ಫಡಿಯ ಮಂಟಪದಲ್ಲಿಯ ಇನ್ನೊಂದು ಶಾಸನ, ಜ್ಯೋತಿರ್ಲಿಂಗ ಗುಡಿಯ 11ನೆಯ ಶತಮಾನದ ಶಾಸನ, ಮಲ್ಲಿಕಾರ್ಜುನ ಗುಡಿಯ 9ನೆಯ ಶತಮಾನದ ಶಾಸನ, ಹುಚ್ಚಿಪ್ಪಯ್ಯನ ಗುಡಿ, ಪರಶುರಾಮನ ಗುಡಿ ಮುಂತಾದ ಸ್ಥಳಗಳಲ್ಲಿ ಅನೇಕ ಶಾಸನಗಳು ಸಿಗುತ್ತವೆ.

ಹೀಗೆ ಐಹೊಳೆಯ ಶಾಸನಗಳು ಪ್ರಶಸ್ತಿ, ದಾನ, ದೇಗುಲ ನಿರ್ಮಾಣಗಳಿಂದ ಹಿಡಿದು ವೀರಗಲ್ಲುಗಳವರೆಗಿನ ಅನೇಕ ಮಾದರಿಗಳಿಗೆ ದೃಷ್ಟಾಂತವೊದಗಿ ಸುತ್ತವೆಯಲ್ಲದೆ ಕರ್ನಾಟಕದ ಇತಿಹಾಸದ ವಿವಿಧ ಮುಖಗಳನ್ನು ದರ್ಶನ ಮಾಡಿಸುತ್ತವೆ.

ಜಿ. ಎಂ. ಶಿರಹಟ್ಟಿ.

ವಿ. ಸೂ. : ಈ ಮೇಲಿನ ವಿಷಯವನ್ನು ವಿಮರ್ಶಿಸಿದಾಗ ಈಗ ನಮಗೆ ತಿಳಿದಿರುವಂತೆ ವಿಜಯನಗರ ಸಾಮ್ರಾಜ್ಯಕ್ಕಿಂತಲೂ ಹಿಂದೆ ಹೋದಾಗ ಬಾದಾಮಿ ಚಾಲುಕ್ಯರ ಕಾಲದ ಗತಕಾಲದ ಇತಿಹಾಸಕ್ಕೆ ಸಂಬಂಧಿಸಿದ 7, 8ನೇ ಶತಮಾನದ ಅಧ್ಯಯನ ಅವಶ್ಯವೆನಿಸಿದೆ. ಐಹೊಳೆ, ಪಟ್ಟದಕಲ್ಲು, ಬಾದಾಮಿಯಂತಹ ಪುರಾತನ ಸಂಸ್ಕೃತಿಯೊಡನೆ ಇರುವ ಸಂಬಂಧವು ಗೋಚರವಾಗುತ್ತದೆ. ಗೌಡ ಜನಾಂಗದಲ್ಲಿರುವ ಚಾಲ್ಯರ ಗೋತ್ರವು ಚಾಲುಕ್ಯರ ಮೂಲವು ಒಂದು ನಿರ್ದಿಷ್ಟ ಜಾತಿಯ ಮೇಲ್ಮೆಯಲ್ಲಿಯೇ ಬಂದಿರುವುದು ಭಾಸವಾಗುತ್ತದೆ. ಅರೆಭಾಷೆಗೌಡರ ಗೋತ್ರಗಳೆಲ್ಲವು ಒಂದು ಜಾತಿಯ ಹೆಸರನ್ನೇ ಹೇಳುತ್ತಿದ್ದರು, ಒಕ್ಕಲಿಗರಂತೆ ಗೋತ್ರ, ಬಳಿಗಳಲ್ಲಿ ಈ ಅಂಶವನ್ನು ಗುರುತಿಸಲು ಆಗುವುದಿಲ್ಲ. ಗೌಡರು ಮೂಲತಃ ಒಕ್ಕಗಳಾಗಿ, ಗಾಮುಂಡರಾಗಿ, ಪಾಳೆಗಾರರಾಗಿ ರಾಜ್ಯವಾಳಿದ ಅದೆಷ್ಟೋ ನಿದರ್ಶನಗಳು ಚರಿತ್ರೆಯಲ್ಲಿವೆ. ಹಾಗಾಗಿ ಲಿಂಗಾಯಿತರಿಂದ ಕಬರ್‌ಗೋತ್ರವು, ನವನಂದರಿಂದ ನಂದರ ಗೋತ್ರವು, ಕೇರಳದ ನಾಯರ್‌ಗಳಿಂಡ ನಾಯರ್ ಗೋತ್ರವು, ಚಾಲುಕ್ಯರಿಂದ ಚಾಲ್ಯರ ಗೋತ್ರವು, ಮುಲ್ಯರಿಂದ ಮೂಲಾರ್ ಗೋತ್ರವು ಹೀಗೆ ಹಲವಾರು ಜನಾಂಗಗಳ ರಕ್ತ ಸಂಬಂಧ ಸಂಪರ್ಕದಿಂದ ಬೆಸುಗೆಯಾಗಿರ ಬಹುದಲ್ಲವೇ? ಆರ್ಯಪುರ, ಅರ್ಯ್ಯ ಭಾಷೆಯೊಂದಿತ್ತು ಎನ್ನುವುದಾದರೆ ಸಂಶೋಧನೆಗೆ ಇದು ಉತ್ತಮ ವಸ್ತುವಲ್ಲವೆ? ಈ ವಿಷಯವಾಗಿ ಜನಾಂಗದ ಯುವ ಪೀಳಿಗೆಗೆ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅಧ್ಯಯನ, ಸಂಶೋಧನೆಗೆ ಯಾಕೆ ಪ್ರಚೋದಿಸಬಾರದು? ಈ ನಿಟ್ಟಿನಲ್ಲಿ ಕೊಡಗು ಗೌಡ ವಿದ್ಯಾ ಸಂಘ, ಗೌಡ ಅಕಾಡೆಮಿ, ಮಡಿಕೇರಿ ಕ್ಷಿಪ್ರ ಕಾರ್ಯ ಪ್ರವೃತ್ತಿಯಾಗವರೇ ಎಂಬುದು ಸಂಗಾತಿಯ ನಿಲುವು ಆಗಿದೆ.

– ಸಂಪಾದಕಿ

ವ್ಯಕ್ತಿ ಪರಿಚಯ :



ಶ್ರೀ ಕುರುಂಜಿ ರಾಮಯ್ಯ ಗಂಗಾಧರನವರು

1999-2000ರ ಸಾಲಿನ ಜಿಲ್ಲಾ "ಅತ್ಯುತ್ತಮ ಶಿಕ್ಷಕ" ಪ್ರಶಸ್ತಿ ಗಳಿಸಿದ ಶ್ರೀ ಕುರುಂಜಿ ರಾಮಯ್ಯ ಗಂಗಾಧರನವರು ದಿನಾಂಕ 5-3-1952ರಂದು ದಿ. ಕುರುಂಜಿ ರಾಮಯ್ಯ ಮಾಸ್ತರ್ ಮತ್ತು ಶ್ರೀಮತಿ ಗಿರಿಜಾರವರ ಎರಡನೆ ಮಗನಾಗಿ ಸುಳ್ಯ ತಾಲೋಕಿನ ಅರಂತೊಡಿನಲ್ಲಿ ಜನಿಸಿದರು. 1970ರಲ್ಲಿ ತನ್ನ 18ನೇಯ ವಯಸ್ಸಿನಲ್ಲೇ ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನಿಂದ ಬಿ. ಎ. ಪದವಿ ಪಡೆದರು. ಮಣಿಪಾಲದ ಶಿಕ್ಷಕ ಶಿಕ್ಷಣ ಕಾಲೇಜಿನಿಂದ ಬಿ.ಎಡ್. ಪದವಿ ಮುಗಿಸಿ 1974ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಇತಿಹಾಸದಲ್ಲಿ ಎಂ. ಎ. ಪದವಿಯನ್ನು ತಮ್ಮದಾಗಿಸಿಕೊಂಡರು. 1971-80ರ ತನಕ 9ವರ್ಷ ಸಂಪಾಜೆ ಪ್ರೌಢ ಶಾಲೆಯಲ್ಲಿ ಪದವೀಧರ ಸಹಾಯಕ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. 1980-91ರ ನೆಹರು ಸ್ಮಾರಕ ಪ್ರೌಢ ಶಾಲೆಯಲ್ಲಿ ಮುಖ್ಯ ಅಧ್ಯಾಪಕರಾಗಿ ಬಡ್ತಿ ಪಡೆದರು. 1991ರಲ್ಲಿ ಪದವಿ ಪೂರ್ವ ಕಾಲೇಜಾದಾಗ ಅದರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದಾರೆ.

ಶೈಕ್ಷಣಿಕ ವೃತ್ತಿ ಸಾಧನೆಗಳನ್ನು ಸಾಕಷ್ಟು ಮಾಡಿದ್ದಾರೆ ಶ್ರೀಯುತರು. ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯಾದ ಪಾಪ್ಯುಲರ್ ಎಜ್ಯುಕೇಷನ್ ಸೊಸೈಟಿ (ರಿ.) ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿನ ಸರ್ವಾಂಗೀಣ ಪ್ರಗತಿಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡಿರುತ್ತಾರೆ. 16 ಕೊಠಡಿಗಳ ವಿಶಾಲ ಕಟ್ಟಡ, 100 ಅಡಿ ಉದ್ದದ ಸಭಾಂಗಣ, ವಿವಿಧೋದ್ದೇಶ ರಂಗ ಮಂದಿರ, ನೀರಿನ ತೊಟ್ಟಿ, ತೆರೆದ ಬಾವಿ, ವಿದ್ಯುತ್ ಪಂಪ್ ಅಳವಡಿಸುವಿಕೆ, ಪ್ರತ್ಯೇಕ ಕ್ರೀಡಾ ಕೊಠಡಿ, ನೂತನ ಪ್ರಯೋಗಾಲಯ ಕಟ್ಟಡ, ಕಂಪ್ಯೂಟರ್ ಕೊಠಡಿ, ಪ್ರತ್ಯೇಕ ಶೌಚಾಲಯಗಳು, ಗೋದಾಮು ಕಟ್ಟಡ, ಶಾಲಾ ಕೈತೋಟ, 20 ತೆಂಗಿನ ಮರಗಳು (ಫಲ ನೀಡುತ್ತಿವೆ), ಶಾಲೆಗೆ ವಾರ್ಷಿಕ ರೂ. 10,000/- ಆದಾಯ ತರುವ ಶಾಲಾ ಅರಣ್ಯ, 200 ಮೀಟರ್ ಟ್ರ್ಯಾಕ್ ಹಾಕುವ ಕ್ರೀಡಾಂಗಣ, ಶಾಲೆಗೆ ಕೂಡು ರಸ್ತೆ, ಪ್ರವೇಶ ದ್ವಾರ, ಪ್ರತ್ಯೇಕ ಗ್ರಂಥ ಭಂಡಾರ ಮತ್ತು ವಾಚನಾಲಯ, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವರೇ ರೂ. 35,000/- ದತ್ತಿ ನಿಧಿ ಸ್ಥಾಪನೆ, ರೂ. 6 ಲಕ್ಷ ವೆಚ್ಚದ ಸುಸಜ್ಜಿತ ಪ್ರಯೋಗಾಲಯ ಕಟ್ಟಡ, 1998-99 ರೂ. 3 ಲಕ್ಷ ವೆಚ್ಚದ ಕ್ರೀಡಾ ಸಭಾಂಗಣ (Pavillion) 1999ರಲ್ಲಿ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಎಸ್.ಎಸ್.ಎಲ್.ಸಿ.ಯಲ್ಲಿ ಕಳೆದ 18 ವರ್ಷಗಳಲ್ಲಿ ಸರಾಸರಿ ಶೇ 80 ಫಲಿತಾಂಶ. ಪಿ.ಯು.ಸಿ.ಯಲ್ಲಿ ಕಳೆದ 6 ವರ್ಷಗಳಲ್ಲಿ ಸರಾಸರಿ ಶೇ. 75 ಫಲಿತಾಂಶ. ಉತ್ತಮ ಇಂಗ್ಲೀಷ್ ಅಧ್ಯಾಪಕ ಮತ್ತು ಜನಪ್ರಿಯ ಆಡಳಿತಗಾರರೆಂದು ಹೆಸರುವಾಸಿಯಾಗಿದ್ದಾರೆ. ಶಾಲೆಯಲ್ಲಿ ವಿದ್ಯಾರ್ಥಿ ಸರಕಾರ ರೂಪಿಸುವುದರ ಜೊತೆಗೆ ವಿಜ್ಞಾನ ಸಂಘ, ನೇಚರ್ ಕ್ಲಬ್, ಸಾಹಿತ್ಯ ಸಂಘ, ಲಲಿತಕಲಾ ಸಂಘ, ಕ್ರೀಡಾ ಸಂಘ, ತೋಟಗಾರಿಕಾ ಸಂಘ, ಕರಕುಶಲ ವಸ್ತು ತಯಾರಿಕಾ ಸಂಘ, ಪಿ.ಯು.ಸಿ. ಕಲಾ ಮತ್ತು ವಿಜ್ಞಾನ ಸಂಘ, ಇಂಟರಾಕ್ಟ ಕ್ಲಬ್‌ಗಳನ್ನು ಶಾಲಾ ಅಧ್ಯಾಪಕರ ಮಾರ್ಗದರ್ಶನದಲ್ಲಿ ರೂಪಿಸಿಕೊಂಡು ವಿದ್ಯಾರ್ಥಿಗಳಿಗೆ ಪಾಠೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವರೇ ಅವಕಾಶ ಮಾಡಿಕೊಡಲಾಗಿದೆ. ಶಾಲಾ ಸಂಚಯಕ ಖಾತೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಸಣ್ಣ ಉಳಿತಾಯಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಕಳೆದ ಮೂರು ವರ್ಷಗಳಿಂದ ಪ್ರೌಢ ಶಾಲಾ ಮತ್ತು ಪದವಿ ಪೂರ್ವ ಕಾಲೇಜು ವಿಭಾಗಗಳಲ್ಲಿ ಸುಳ್ಯ ತಾಲೂಕಿನ ಸಮಗ್ರ ಚಾಂಪಿಯನ್ ಶಿಪ್ ಗಳಿಸುವಲ್ಲಿ ಪ್ರೋತ್ಸಾಹ, ಮಾರ್ಗದರ್ಶನ ಮಾಡಿದ್ದಾರೆ.

ಸುಳ್ಯ ತಾಲೂಕು ಪ್ರೌಢ ಶಾಲಾ ಮತ್ತು ಪದವಿ ಪೂರ್ವ ಕಾಲೇಜು ಮುಖ್ಯಸ್ಥರ ಸಂಘದ ಕಾರ್ಯದರ್ಶಿಯಾಗಿ ಅದರ ಆರಂಭದಿಂದಲೇ ದುಡಿದಿದ್ದಾರೆ. ಜಿಲ್ಲಾ ಸಂಘದ ನಿರ್ದೇಶಕರರಾಗಿಯೂ ಸೇವೆ ಸಲ್ಲಿಸಿ, ತಾಲೂಕು ಸಂಘದ ಆಶ್ರಯದಲ್ಲಿ ಏರ್ಪಡಿಸಿದ ಕೆಲವು ಶೈಕ್ಷಣಿಕ, ಕಾರ್ಯಾಗಾರಗಳ ಹಿನ್ನೆಲೆಯಲ್ಲಿ ದುಡಿಮೆ ಇವರದ್ದಾಗಿದೆ. ಅರಂತೋಡು ಪ್ರಾಥಮಿಕ ಶಾಲಾ ಸಂಕೀರ್ಣದ ಅಧ್ಯಕ್ಷರಾಗಿ ಅದರ ಚಟುವಟಿಕೆಗಳನ್ನು ಹೆಚ್ಚು ರಚನಾತ್ಮಕಗೊಳಿಸುವಲ್ಲಿ ಮಾರ್ಗದರ್ಶನ ನೀಡಿದ್ದಾರೆ. ವೈಯುಕ್ತಿಕವಾಗಿ ಅನೇಕ ಶೈಕ್ಷಣಿಕ ಕಾರ್ಯಾಗಾರ, ಸೆಮಿನಾರ್ ಮತ್ತು ಪುನಶ್ಚೇತನ ಶಿಬಿರಗಳಲ್ಲಿ ಭಾಗವಹಿಸಿದುದಲ್ಲದೇ ತರಬೇತುದಾರರಾಗಿಯೂ ಪಾಲ್ಗೊಂಡಿರುತ್ತಾರೆ

ಜೇಸಿಯಾಗಿ ಸಹ ಕಾರ್ಯನಿರ್ವಹಿಸಿದ್ದಾರೆ. ಸುಳ ಪಯಸ್ವಿನಿ ಜೂನಿಯರ್ ಛೇಂಬರ್ ಸ್ಥಾಪಕ ಸದಸ್ಯರಾಗಿದ್ದಾರೆ. 1986ರಲ್ಲಿ ಅದರ ಅಧ್ಯಕ್ಷರಾಗಿ ಘಟಕಕ್ಕೆ ಕರ್ನಾಟಕ ರಾಜ್ಯ ಜೇಸಿಸನ ಅತ್ಯುತ್ತಮ ಘಟಕ ಮತ್ತು ವೈಯುಕ್ತಿಕವಾಗಿ ಅತ್ಯುತ್ತಮ ಘಟಕಾಧ್ಯಕ್ಷ ಪ್ರಶಸ್ತಿ ಗಿಟ್ಟಿಸಿಕೊಂಡಿರುತ್ತಾರೆ. 1986ರಲ್ಲಿ ಭಾರತೀಯ ಜೇಸಿಸ್‌ನ ರಾಜ್ಯ ತರಬೇತುದಾರರಾಗಿ ಆಯ್ಕೆ ಆಗಿದ್ದಾರೆ. ಅಂದಿನಿಂದ ಸುಮಾರು 500ಕ್ಕೂ ಅಧಿಕ ವ್ಯಕ್ತಿ ವಿಕಸನ ತರಬೇತಿಯನ್ನು ನೀಡಿರುತ್ತಾರೆ. 1989ರಲ್ಲಿ ಕರ್ನಾಟಕ ರಾಜ್ಯ ಜೇಸಿಸ್‌ನ ಅತ್ಯುತ್ತಮ ತರಬೇತುದಾರರಾಗಿ ಪ್ರಶಸ್ತಿಯನ್ನು ಸಹ ಪಡೆಯುವಲ್ಲಿ ಸಫಲರಾಗಿದ್ದಾರೆ.

ಸಾಕ್ಷರತಾ ಆಂದೋಲನದಲ್ಲಿ ಸಹ ಹಿಂದೆ ಬಿದ್ದಿಲ್ಲ. 1990-91ರ ದ. ಕ. ಜಿಲ್ಲಾ ಸಾಕ್ಷರತಾ ಆಂದೋಲನದಲ್ಲಿ ಸ್ವಯಂ ಸೇವಕರಾಗಿ, ಪರಿಣಿತ ತರಬೇತುದಾರರಾಗಿ, ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಅರಂತೋಡು ಮಂಡಲ ಪಂಚಾಯತ್ ಸಾಕ್ಷರತಾ ಸಮಿತಿ ಕಾರ್ಯದರ್ಶಿಯಾಗಿಯೂ ದುಡಿಮೆ ಮಾಡಿದ್ದಾರೆ. 1992ಮತ್ತು 93ರಲ್ಲಿ ಎರಡು ವರ್ಷಗಳ ಕಾಲ ಸುಳ್ಯ ತಾಲೂಕು ನಿರಂತರ ಶಿಕ್ಷಣ ಕ್ರಿಯಾ ಸಮಿತಿಯ ಗೌರವ ಕಾರ್ಯದರ್ಶಿಯಾಗಿ ಮತ್ತು ಜಿಲ್ಲಾ ಸಮಿತಿಯ ಸದಸ್ಯರಾಗಿ ಸೇವೆಗೈದರು. ಲೋಕ ಶಿಕ್ಷಣ ನಿರ್ದೇಶನಾಲಯದ "ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ಸಮುಚ್ಚಯ"ದ ಸದಸ್ಯರಾಗಿದ್ದಾರೆ.

ಹವ್ಯಾಸಿ ಅಂಚೆ ಚೀಟಿ ಸಂಗ್ರಹಕಾರರಾಗಿರುವ ಶ್ರೀಯುತರು "ಭಾರತೀಯ ಪ್ರತಿಷ್ಠಿತ ವ್ಯಕ್ತಿಗಳು" ವಿಷಯದ ಮೇಲೆ ರೂಪಿಸಿದ ಅಂಚೆ ಚೀಟಿ ಸಂಗ್ರಹಕ್ಕೆ "ಕೊಡಫಿಲ್" ಅಂಚೆ ಚೀಟಿ ಪ್ರದರ್ಶನದಲ್ಲಿ ಸುವರ್ಣ ಪದಕ ಮತ್ತು 'ಮಂಗಳ ಫೆಕ್ಸ್' ರಾಜ್ಯ ಮಟ್ಟದ ಅಂಚೆ ಚೀಟಿ ಪ್ರದರ್ಶನದಲ್ಲಿ ಕಂಚಿನ ಪದಕ ಗಿಟ್ಟಿಸಿದ ಹೆಮ್ಮೆಯ ಬಾಂಧವರಾಗಿದ್ದಾರೆ. ಸುಮಾರು 30 ರಾಷ್ಟ್ರಗಳ ಸುಮಾರು 10 ಸಾವಿರ ಅಂಚೆ ಚೀಟಿಗಳ ಸಂಗ್ರಹಿಸಿದ ಕೀರ್ತಿ ಇವರದು. 'ವ್ಯೂ ಕಾರ್ಡ್ಸ್' ಮತ್ತು ನಾಣ್ಯಗಳ ಸಂಗ್ರಹ ಕೂಡಾ ಇವರ ಹವ್ಯಾಸಗಳಲ್ಲಿ ಸೇರಿದೆ.

ಸಾಹಿತ್ಯ ಸೇವೆಯಲ್ಲೂ ಮುಂದುವರಿದ ಇವರು ಅಮರ, ಅಕ್ಷಯ, ಮಲ್ಲಿಕಾ, ವೀಳ್ಯ, ಸಾಧನೆ, ಸ್ಪಂದನ, ಆರಾಧನೆ, ನವನೀತ ಮೊದಲಾದ 11 ಸ್ಮರಣ ಸಂಚಿಕೆಗಳನ್ನು ಹೊರತರುವಲ್ಲಿ ಅದರ ಸಂಪಾದಕ ಮಂಡಳಿ ಸದಸ್ಯರಾಗಿ ದುಡಿದಿದ್ದಾರೆ. 1997ರಲ್ಲಿ ಅರಂತೋಡುನಲ್ಲಿ ಜರುಗಿದ ಸುಳ್ಯ ತಾಲೂಕು 4ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಸಹ ಸೇವೆ ಸಲ್ಲಿಸಿದ್ದಾರೆ. ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿಯ ನಿರ್ದೇಶಕ ಮತ್ತು ಸುಳ್ಯ ತಾಲೂಕು ಕನ್ನಡ ಕಾವಲು ಸಮಿತಿ ಸದಸ್ಯರಾಗಿರುವ ಇವರ ಶೈಕ್ಷಣಿಕ ಮತ್ತು ಸಾಮಾಜಿಕ ಮಹತ್ವವುಳ್ಳ ಲೇಖನಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ಸ್ಮರಣ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ.

ಉತ್ತಮ ಸಂಘಟಕಗಾರನಾಗಿ ಸಹ ತಮ್ಮ ಸೇವೆಯನ್ನು ಸಮಾಜಕ್ಕೆ ನೀಡಿದ ಇವರು ತಮ್ಮ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನೆಹರು ಸ್ಮಾರಕ ಮಹಾವಿದ್ಯಾಲಯ ಸುಳ್ಯ ಇದರ 2 ಎನ್.ಎಸ್.ಎಸ್. ಶಿಬಿರಗಳು ಸರಕಾರಿ ಪದವಿ ಪೂರ್ವ ಕಾಲೇಜು ಸುಳ್ಯದ 2 ಎನ್.ಎಸ್.ಎಸ್. ಶಿಬಿರಗಳು, ನೆಹರು ಯುವಕ ಕೇಂದ್ರ ಮಂಗಳೂರಿನ 2 ಶಿಬಿರಗಳು ಅಲ್ಲದೆ ಇನ್ನೂ ಕೆಲವು ಬೇಸಿಗೆ ಶಿಬಿರ ಮತ್ತು ನಾಟಕ ಶಿಬಿರಗಳನ್ನು ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಸುಮಾರು 200 ಎನ್.ಎಸ್.ಎಸ್. ಸ್ವಯಂ ಸೇವಕರನ್ನು (ಹುಡುಗಿಯರು) ತೊಡಿಕಾನ, ಪಟ್ಟಿ ಮೂಲಕ ಭಾಗಮಂಡಲಕ್ಕೆ ಟ್ರೆಕ್ಕಿಂಗ್ ಕಾರ್ಯಕ್ರಮದ ನೇತೃತ್ವ ವಹಿಸಿರುತ್ತಾರೆ. ಸುಳ್ಯದಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಶಿಬಿರ ನಡೆದಾಗ ಅದರ 1500 ಶಿಬಿರಾರ್ಥಿಗಳನ್ನು ತೊಡಿಕಾನಕ್ಕೆ ಕರೆದೊಯ್ದು ಕರೆತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ಸುಳ್ಯದಲ್ಲಿ ನಡೆದ 7ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಯುವಜನ ಮೇಳ, ರಾಜ್ಯೋತ್ಸವ ಆಚರಣೆ, ಶಿಕ್ಷಕರ ದಿನಾಚರಣೆ ಮೊದಲಾದ ಸಮಾರಂಭಗಳನ್ನು ನಡೆಸುವಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಭಾಗವಹಿಸಿದ್ದಾರೆ. 1996 ಮತ್ತು 98ರಲ್ಲಿ ಸುಳ್ಯ ತಾಲೂಕು ಅಂತರ್ ಪ್ರೌಢ ಶಾಲಾ ಕ್ರೀಡಾ ಕೂಟವನ್ನು ತಮ್ಮ ಶಾಲೆಯ ಮೈದಾನದಲ್ಲಿ ಯಶಸ್ವಿಯಾಗಿ ನಡೆಸಿಕೊಟ್ಟ ಕೀರ್ತಿ ಇವರದು. 1999ರಲ್ಲಿ ಜಿಲ್ಲಾ ಮಟ್ಟದ ಯುವಜನ ಮೇಳ ಸಂಘಟಿಸುವಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ನೀಡಿದ ಸೇವೆ ಅಮೋಘವಾದದು.

ಸಮಾಜಿಕ ಕಳಕಳಿ ಇರುವ ಅರಂತೋಡು ಪಾಪ್ಯುಲರ್ ಎಜ್ಯುಕೇಷನ್ ಸೊಸೈಟಿ (ರಿ.) ನಿರ್ದೇಶಕರಾಗಿದ್ದು ಅರಂತೋಡು ಯುವಕ ಮಂಡಲ, ಮಹಿಳಾ ಮಂಡಲ, ಭಜನಾ ಮಂದಿರ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಲಹಾ ಸಮಿತಿ ಸದಸ್ಯರಾಗಿದ್ದಾರೆ. ಒ.ಬಿ.ಸಿ. ವಿದ್ಯಾರ್ಥಿನಿಲಯ ಅರಂತೋಡು ಇದರ ಸಲಹಾ ಸಮಿತಿ ಸದಸ್ಯರಾಗಿದ್ದಾರೆ. ಅರಂತೋಡು ಹಿಂದಿನ ಮಂಡಲ ಪಂಚಾಯತ್ ಮತ್ತು ಇಂದಿನ ಗ್ರಾಮ ಪಂಚಾಯತ್‌ನ ಎಲ್ಲಾ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುತ್ತಾ ಮತ್ತು ಭಾಗವಹಿಸುತ್ತಿದ್ದಾರೆ. ಅರಂತೋಡಿನಲ್ಲಿ ದೂರವಾಣಿ ವಿನಿಮಯ ಕೇಂದ್ರ ಮತ್ತು ಸಬ್‌ಪೋಸ್ಟ್ ಆಫೀಸು ಆಗುವರೇ ಕ್ರಮ ತೆಗೆದುಕೊಂಡಿದ್ದಾರೆ. ಅರಂತೋಡುನಲ್ಲಿ 30 ಸದಸ್ಯರುಳ್ಳ ಗೃಹರಕ್ಷಕದಳ ಘಟಕ (Home Guards) ಸ್ಥಾಪಿಸಲು ಕಾರಣಕರ್ತರಾದ ಇವರು, ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್ (ರಿ) ಸುಳ್ಯದ ಆಶ್ರಯದಲ್ಲಿರುವ ಮಹಾಲಿಂಗ ಮಾಸ್ತರ್ ಫೌಂಡೇಶನ್ (ರಿ) ಯ ನಿರ್ದೇಶಕರಾಗಿದ್ದಾರೆ. ಬೆಳ್ಳಾರೆಯಲ್ಲಿ ಇತ್ತೀಚೆಗೆ ಸ್ಥಾಪನೆಯಾದ ಜ್ಞಾನ ಗಂಗಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಆಡಳಿತ ಮಂಡಳಿಯಾದ ಶಿಕ್ಷಣ ಗಂಗಾ ಟ್ರಸ್ಟ್ (ರಿ)ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವೆಲ್ಲವುದರ ಜೊತೆಗೆ ಮೂರು ಬಾರಿ ರಕ್ತದಾನ ಮಾಡಿ ಜೀವ ಉಳಿಸುವ ಕಾರ್ಯದಲ್ಲೂ ಸಹ ತಮ್ಮನ್ನು ತೊಡಗಿಸಿ ಕೊಂಡಿರುವ ಇವರು ಮಡಿಕೇರಿ ಸಮೀಪದ ಅವಂದೂರು ಗ್ರಾಮದ ಪಟ್ಟಡ ತಿಮ್ಮಯ್ಯನವರ ಮಗಳು ಶಾಂತಿಯೊಡನೆ ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿರುವ ಶ್ರೀಯುತರ ಜೀವನದ ಆಸೆ ಆಕಾಂಕ್ಷೆಗಳೆಲ್ಲವೂ ನೆರವೇರಲಿ ಎಂದು ಕುಲದೇವು ವೆಂಕಟರಮಣನನ್ನು ನೆನೆಯೋಣವೆ? ಸಂಗಾತಿಯ ತುಂಬು ಹೃದಯದ ವಂದನೆಗಳು.

ಪಟ್ಟಡ ಪ್ರಭಾಕರ

ಮದುವೆಯಾಗುವವರೆಗೆ
ನೀ ನನ್ನ ಪ್ರಿಯೆ
ಮದುವೆಯಾದ ನಂತರ
ನೀ ನನ್ನ 'ಪಿ. ಎ.'

ಗುಡ್ಡನ ಆರ್. ರಾಘುವೇಂದ್ರ, ಕುಶಾಲನಗರ

ಜನ ವಿದ್ಯಾವಂತರಾದಾಗ ಮಾತ್ರ ಸಮಾಜ ಉದ್ಧಾರವಾದೀತು : ಕುರುಂಜಿ ವೆಂಕಟ್ರಮಣ ಗೌಡ

ಮರಗೋಡು ಗೌಡ ಕಲ್ಯಾಣ ಮಂಟಪ ಜನತೆಗೆ ಅರ್ಪಣೆ

ಸಮಾಜದಲ್ಲಿ ವಿದ್ಯೆಯು ತನ್ನದೇ ಆದ ಮಹತ್ವವನ್ನು ಪಡೆದಿರುವುದರಿಂದ ಆ ವಿದ್ಯೆಯನ್ನು ಗಳಿಸಲು ಪ್ರತಿಯೊಬ್ಬರೂ ಮುಂದಾಗಬೇಕು. ಪ್ರತಿಯೊಬ್ಬ ತಂದೆ ತಾಯಂದಿರು ಆಭರಣ ಮತ್ತಿತರ ಸೋಗಲಾಡಿತನಕ್ಕೆ ಹಣ ಖರ್ಚು ಮಾಡುವ ಬದಲು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ವ್ಯಯಿಸಬೇಕು. ತಮ್ಮ ಮಕ್ಕಳನ್ನಷ್ಟೇ ಅಲ್ಲದೆ ತಮ್ಮ ನೆರೆಹೊರೆಯ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಪ್ರೇರೇಪಿಸಬೇಕು. ಹೀಗೆ ಪ್ರತಿಯೊಬ್ಬರೂ ವಿದ್ಯಾಭ್ಯಾಸ ಪಡೆದು ತಮ್ಮ ವ್ಯಕ್ತಿತ್ವವನ್ನು ವೃದ್ಧಿಸಿಕೊಂಡಾಗ ಮಾತ್ರ ಸಮಾಜ ಉಚ್ಛ್ರಾಯ ಮಟ್ಟಕ್ಕೆ ಬೆಳವಣಿಗೆಯಾದೀತು ಎಂದು ಹಿರಿಯ ಕೊಡುಗೈದಾನಿ, ಗೌಡ ಜನಾಂಗದ ಮೇರುವ್ಯಕ್ತಿ, ಕೆ. ವಿ. ಜಿ. ವಿದ್ಯಾಸಂಸ್ಥೆಯ ಸಂಸ್ಥಾಪಕರೂ ಆದ ಕುರುಂಜಿ ವೆಂಕಟ್ರಮಣಗೌಡರು ಅಭಿಪ್ರಾಯ ಪಟ್ಟಿದ್ದಾರೆ.

ಅವರು ಅಕ್ಟೋಬರ್ 31ರಂದು ಮರಗೋಡಿನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಗೌಡ ಕಲ್ಯಾಣಮಂಟಪವನ್ನು ಜನತೆಗೆ ಅರ್ಪಿಸಿ, ಅಲ್ಲಿ ನೆರೆದಿದ್ದ ಬೃಹತ್ ಜನ ಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಾ ಸುಳ್ಯದಲ್ಲಿರುವ ನಮ್ಮ ವಿದ್ಯಾಸಂಸ್ಥೆಯಲ್ಲಿ ಉಚಿತ ಸೀಟುಗಳೂ ಲಭ್ಯವಿದ್ದು, ಪಿ.ಯು.ಸಿ. ವಿಜ್ಞಾನ ವಿಷಯದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ನಮ್ಮ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಮರಗೋಡಿನಲ್ಲಿ ಕಲ್ಯಾಣಮಂಟಪವನ್ನು ನಿರ್ಮಾಣ ಮಾಡಿದ ಜನತೆಯ ಸಾಧನೆಯನ್ನು ಶ್ಲಾಘಿಸಿದ ಅವರು ಸಾಧಿಸುವುದು ಕಷ್ಟ ಅನುಭವಿಸುವುದು ಸುಲಭ. ಒಳ್ಳೆಯ ಕೆಲಸ ಮಾಡಿದವರನ್ನು ಜನ ಸದಾ ಸ್ಮರಿಸುತ್ತಾರೆ. ಕೆಡುಕು ಮಾಡುವವರನ್ನು ಶಪಿಸುತ್ತಾರೆ ಎಂದರು. ಯುವಕರು ದುಶ್ಚಟಗಳಿಂದ ದೂರ ಉಳಿಯಬೇಕೆಂದರಲ್ಲದೆ ತನಗೆ ದುಶ್ಚಟಗಳಿಲ್ಲದ್ದರಿಂದಲೇ ನಾನಿನ್ನೂ ಯುವಕನಾಗಿದ್ದೇನೆ ಇದರಿಂದಲೇ ಸಾಧನೆಯ ಕೆಚ್ಚು ನನ್ನಲ್ಲಿದೆ, ಪರಿಣಾಮವಾಗಿ ಎಲ್ಲಾ ಗೌಡ ಸಂಘಟನೆಗಳ ಕಟ್ಟಡಕ್ಕೆ ನೆರವು ನೀಡುತ್ತಿದ್ದೇನೆ, ಈಗ ನಾಡಿನಲ್ಲಿರುವ ಎಲ್ಲಾ ಗೌಡ ಸಮಾಜಗಳ ಕೃಪೆಯಿಂದ ನಾವಿಂದ ತಲೆಯೆತ್ತಿ ನಿಲ್ಲುವಂತಾಗಿದೆ ಎಂದು ಅಭಿಪ್ರಾಯ ಪಟ್ಟರು.

ಸಮಾರಂಭಕ್ಕೆ ಅನಿರೀಕ್ಷಿತವಾಗಿ ಆಗಮಿಸಿದ್ದ ಮಾಜಿ ಶಾಸಕ ದಂಬೆಕೋಡಿ ಮಾದಪ್ಪನವರು ಮಾತನಾಡಿ ಮರಗೋಡಿನ ಜನ ಮೊದಲು ಬೇರೆ ಬೇರೆ ಊರುಗಳಲ್ಲಿ ಗೌಡ ಕಲ್ಯಾಣ ಮಂಟಪಗಳ ಸ್ಥಾಪನೆಗಳಿಗೆ ಉದಾರ ಕೊಡುಗೆ ನೀಡಿ, ನಂತರ ತಮ್ಮೂರಿನಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿ ಉತ್ತಮ ಸಂಸ್ಕೃತಿ, ಪರಂಪರೆಯನ್ನು ಮೆರೆದಿದ್ದಾರೆ. ಕೊಡಗಿನಲ್ಲಿ ಉತ್ತಮ ಒಗ್ಗಟ್ಟನ್ನು ಪ್ರದರ್ಶಿಸಬಲ್ಲ ಶಕ್ತಿಯನ್ನು ಈ ಭಾಗದ ಜನ ಹೊಂದಿದ್ದಾರೆಂದು ಜನತೆಯನ್ನು ಮುಕ್ತ ಕಂಠದಿಂದ ಕೊಂಡಾಡಿದರು. 1837 ಅಕ್ಟೋಬರ್ 31ರಂದು ಹುತಾತ್ಮರಾದ ಗುಡ್ಡೆಮನೆ ಅಪ್ಪಯ್ಯಗೌಡರನ್ನು ಸ್ಮರಿಸಿಕೊಂಡ ಅವರು, ನಾವಿಂದು ಆರ್ಥಿಕವಾಗಿ ಪ್ರಬಲರಾಗುತ್ತಿದ್ದೇವೆ. ಆದರೆ ಅದರ ಜೊತೆಯಲ್ಲೇ ಬರುವ ದೌಂದುಗಾರಿಕೆ, ದುರಾಡಳಿತ ಬಗ್ಗೆ ಎಚ್ಚರವಿರಬೇಕೆಂದು ರೋಂನ ಇತಿಹಾಸವನ್ನು ವಿಶ್ಲೇಷಿಸಿ ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕೊಡಗು ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಊರುಬೈಲು ಜಯಪ್ರಕಾಶ್‌ರವರು ಮಾತನಾಡಿ ಕಲ್ಯಾಣ ಮಂಟಪದ ಉದ್ದೇಶ ಕೇವಲ ಮದುವೆ ಮತ್ತಿತ್ತರ ಸಮಾರಂಭಗಳಿಗೆ ಅವಕಾಶ ನೀಡುವುದು ಮಾತ್ರವೇ ಆಗಿರದೆ, ಜನಾಂಗವನ್ನು ಬೆಳಕಿನೆಡೆಗೆ ಕೊಂಡೊಯ್ಯುವ ಮಹಾದುದ್ದೇಶ ಹೊಂದಿರಬೇಕೆಂಬ ಇಂಗಿತ ವ್ಯಕ್ತಪಡಿಸಿದರು. ಅಮ್ಮಾಜೀರ ಪೊನ್ನಪ್ಪನವರು ಉದಯ ಟಿ.ವಿ. ಕಾರ್ಯಕ್ರಮದಲ್ಲಿ ಅರೆಭಾಷೆಯಲ್ಲಿ ಆಯೋಜಿಸಿದ ನೃತ್ಯ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಇದು ನಮ್ಮ ಭಾಷೆಯ, ಸಂಸ್ಕೃತಿಯ ಮಹಿಮೆಯನ್ನು ತೋರಿಸುತ್ತದೆ ಎಂದು ಜಯಪ್ರಕಾಶ್‌ರವರು ಮರಗೋಡು ಗೌಡ ಸಮಾಜದ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರ ಅನ್ಯೋನ್ಯತೆಯನ್ನು ಪ್ರಶಂಸಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಗೌಡ ವಿದ್ಯಾ ಸಂಘದ ಕಾರ್ಯದರ್ಶಿ ದಾಮೋದರ ಗೌಡರು ಸಮಾಜ ಉದ್ಧಾರವಾಗದೆ ಜನಾಂಗ ಬೆಳೆಯಲು ಸಾಧ್ಯವಾಗದು, ಸಮಾಜದ ಉದ್ಧಾರಕ್ಕೆ ಕಲ್ಯಾಣ ಮಂಟಪಗಳ ಕೊಡುಗೆ ಅಪಾರವಾದುದು ಎಂದರಲ್ಲದೆ ಸುಳ್ಯದ ಕೆ. ವಿ. ಜಿ. ವಿದ್ಯಾಸಂಸ್ಥೆಯ ಔನ್ನತ್ಯವನ್ನು ವಿವರಿಸಿ, ಮರಗೋಡಿನಲ್ಲೂ ವಿದ್ಯಾಸಂಸ್ಥೆಯ ಉಗಮವಾಗಬೇಕೆಂಬ ಬಯಕೆ ವ್ಯಕ್ತಪಡಿಸಿದರು. ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಕುಯ್ಯುಮುಡಿ ಪೂರ್ಣಯ್ಯನವರು ಮಾತನಾಡಿ ಕೊಡಗಿನಾದ್ಯಂತ ಗೌಡ ಕುಟುಂಬಗಳು ಬಡತನದಲ್ಲಿ ಮುಳುಗಿದ್ದು, ಆರ್ಥಿಕ ಮುನ್ನಡೆ ಸಾಧಿಸಿರುವ ಮರಗೋಡಿನ ಜನತೆಯ ಕೊಡುಗೆ ನಮ್ಮ ಜನಾಂಗಕ್ಕೆ ಅತ್ಯಮೂಲ್ಯವಾದುದು. ಅವರು ನಮ್ಮ ಯುವ ಪೀಳಿಗೆಯನ್ನು ಮುನ್ನೆಡೆಸುವ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಕರೆ ನೀಡಿದರು. ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶ್‌ರವರು ಗೌಡ ಸಂಘಟನೆಯಲ್ಲಿ ದಿವಂಗತ ದಂಬೆಕೋಡಿ ಸುಬ್ರಾಯ ಮತ್ತು ಪೇರಿಯನ ಪೂವಯ್ಯನವರ ಸೇವೆಯನ್ನು ಸ್ಮರಿಸಿದರಲ್ಲದೆ, ಗೌಡ ಸಮಾಜಗಳು ಜನರೊಂದಿಗೆ ಸದಾಮಿಳಿತವಾಗಿದ್ದು, ಅವರ ಸರ್ವ ಬೇಡಿಕೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕೆಂದರು. ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿರ ರಾಧಯಾದವ್‌ರವರು ಕೊಡಗಿನಾದ್ಯಂತ ಗೌಡ ಸಮಾಜಗಳು ತಲೆಯೆತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿ, ಜನಾಂಗದ ಅಭಿವೃದ್ಧಿಗೆ ಕಂಕಣಬದ್ಧರಾಗುವಂತೆ ಸ್ಥಳೀಯ ಬಂಧುಗಳಿಗೆ ಕರೆ ನೀಡಿದರು. ಇವರಲ್ಲದೆ ಬೇಕಲ್ ಜಯರಾಮ್, ಬಳಪದ ಸೋಮಣ್ಣ ಮೊದಲಾದ ಹಿರಿಯರು ಮಾತನಾಡಿ ಗೌಡ ಜನಾಂಗದ ಮುನ್ನಡೆಗೆ ಮಾರ್ಗದರ್ಶನ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮರಗೋಡು ಗೌಡ ಸಮಾಜದ ಅಧ್ಯಕ್ಷರಾದ ಬೈಮನ ಪೊನ್ನಪ್ಪನವರು ವಹಿಸಿದ್ದರು. ವೇದಿಕೆಯಲ್ಲಿ ಕೊಡಗಿನ ಎಲ್ಲಾ ಗೌಡ ಸಮಾಜಗಳ ಅಧ್ಯಕ್ಷರು, ಪ್ರಮುಖರು ಉಪಸ್ಥಿತರಿದ್ದರು. ಬೈಮನ ಪೊನ್ನಪ್ಪನವರು ಸಭೆಗೆ ಸ್ವಾಗತಿಸಿದರು. ಕಟ್ಟೆಮನೆ ಜನಾರ್ಧನರವರು ವರದಿ ವಾಚಿಸಿದರು. ಕಟ್ಟೆಮನೆ ಹೇಮಾಜನಾರ್ಧನರವರ ಪ್ರಾರ್ಥನೆಯೊಂದಿಗೆ ಆರಂಭ ಗೊಂಡ ಕಾರ್ಯಕ್ರಮ, ಜೈನೀರ ವೆಂಕಟೇಶ್‌ರವರ ವಂದನಾರ್ಪಣೆ ಯೊಂದಿಗೆ ಮುಕ್ತಾಯಗೊಂಡಿತು. ಕಾರ್ಯಕ್ರಮವನ್ನು ಮಳ್ಳಂದಿರ ಕೃಷ್ಣರಾಜು ನಿರೂಪಿಸಿದ್ದರು.

ಮರಗೋಡು ಗೌಡ ಸಮಾಜ ಸಂಗಾತಿ ಕಂಡಂತೆ.....

ಮರಗೋಡು, ಕಟ್ಟೆಮಾಡು, ಹೊಸ್ಕೇರಿ, ಐಕೊಳ ಗ್ರಾಮಗಳ ಗೌಡ ಬಾಂಧವರ ಶ್ರಮದ ಫಲ ಫಲಬಿಟ್ಟಿತ್ತು. ಎಂಟು ವರ್ಷಗಳ ನಿರಂತರ ಸಾಧನೆಯ ಬಳಿಕ ಗೌಡ ಕಲ್ಯಾಣಮಂಟಪ ತಲೆಯೆತ್ತಿ ನಿಂತಿತ್ತು. ಬಡುವಂಶ್ರ ರಾಘವಯ್ಯ, ಉಳುವಾರನ ಗೋಪಾಲ, ಬಡುವಂಶ್ರ ಪೂವಯ್ಯ, ಉಳುವಾರನ ಸುಬ್ಬಯ್ಯನವರ ಜಾಗದ ದೇಣಿಗೆ, ಬೈಮನ ಪೊನ್ನಪ್ಪ, ಬಳಪದ ಸೋಮಣ್ಣರವರ ಉದಾರ ದೇಣಿಗೆ, ಇದರೊಂದಿಗೆ ಮೇಲಿನ ನಾಲ್ಕು ಗ್ರಾಮಗಳ ಜನತೆ ನಾಮುಂದು ತಾಮುಂದು ಎಂದು ತಮ್ಮಲ್ಲಿ ಮಡುಗಟ್ಟಿದ್ದ ಜನಾಂಗ ಪ್ರೇಮವನ್ನು ಹರಿಯಬಿಟ್ಟಾಗ ಸುಂದರವಾಗಿ ರೂಪುಗೊಂಡಿತು ಮರಗೋಡು ಗೌಡ ಕಲ್ಯಾಣಮಂಟಪ.

ಅಂದು ಅಕ್ಟೋಬರ್ 31. ಮರಗೋಡು ಕಲ್ಯಾಣ ಮಂಟಪ ನವವಧುವಿನಂತೆ ಶೃಂಗರಿಸಿ ನಿಂತಿತ್ತು. ಮಂಟಪದ ಹೊರಗಡೆ ಕೊಡಗಿನ ಮಂಗಳವಾದ್ಯ ಮೊಳಗುತ್ತಿತ್ತು. ಒಳಗಡೆ ಜ್ಯೋತಿ ಬೆಳಗಿಸುವ ಮೂಲಕ, ಜನರ ಹೃದಯವನ್ನು ಬೆಳಗಿಸುವ ಕೈಂಕರ್ಯಕ್ಕೆ ಕಲ್ಯಾಣ ಮಂಟಪ ಕೈಹಾಕಿತು. ಇದನ್ನು ನೋಡಿ ಆನಂದಿಸುವುದಕ್ಕಾಗಿ ಕೊಡಗಿನಾದ್ಯಂತ ಮಾತ್ರವಲ್ಲದೆ ಮೈಸೂರು, ಬೆಂಗಳೂರುಗಳಿಂದಲೂ ಗೌಡಬಾಂಧವರು ಸಾಗರೋಪಾದಿಯಲ್ಲಿ ನೆರೆದಿದ್ದರು. ನೂತನ ಗೌಡ ಕಲ್ಯಾಣ ಮಂಟಪದ ಉದ್ಘಾಟನೆ ಯೊಂದಿಗೆ 3ನೇ ವರ್ಷದ ಕೈಲ್ ಮುಹೂರ್ತವನ್ನೂ ಆಚರಿಸಿ ಸಂತಸ ಪಟ್ಟರು.

ಸಮಾರಂಭದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರೇ ಸೇರಿದ್ದು, ಜನಾಂಗ ಸಂಘಟನೆಯಲ್ಲಿ ಅವರಿಗಿರುವ ಉತ್ಸಾಹವನ್ನು ತೋರಿಸುತ್ತಿತ್ತು. ಸಭಾಂಗಣದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ವೇದಿಕೆಯ ಮೇಲಿಂದ ಅತಿಥಿಗಳ ಭಾಷಣದ ಬಾಲ ಬೆಳೆಯುತ್ತಿದ್ದಂತೆ, ಜನರ ಉತ್ಸಾಹವೂ ಕಮರತೊಡಗಿ, ಅವರು ತಮ್ಮದೇ ಚರ್ಚೆಯಲ್ಲಿ ತೊಡಗಿದ್ದರೆ ಇನ್ನೂ ಕೆಲವರು ಜಾಗ ಖಾಲಿ ಮಾಡಿ ಹೊರಟೇ ಬಿಟ್ಟರು. ಮಹಿಳೆಯರು ಮತ್ತು ಪುರುಷರಲ್ಲಿ ಜನಾಂಗದ ಉಡುಗೆ ತೊಡುಗೆ ತುಂಬಾ ಅಪರೂಪವಾಗಿತ್ತು. ಕೆಲವು ಯುವಕ ಯುವತಿಯರಿಗೆ ಅರೆಭಾಷೆ ಸಹ ಅಸ್ಪೃಶ್ಯವಾಗಿತ್ತು. ಊಟದ ವ್ಯವಸ್ಥೆ ಸಮರ್ಪವಾಗಿದ್ದಿತಾದರೂ ವ್ಯವಸ್ಥಿತವಾಗಿರಲಿಲ್ಲ. ಹೀಗೆ ಸಣ್ಣಪುಟ್ಟ ತೊಡರುಗಳು ಕಂಡು ಬಂದರೂ ಜನ ಉತ್ಸಾಹದಿಂದ ಕಾರ್ಯಕ್ರಮ ಮುಗಿಯುವವರೆಗೂ ಸಹ ಭಾಗಿಗಳಾಗಿದ್ದರು.

ಮನರಂಜಿಸಿದ ಸಾಂಸ್ಕೃತಿಕ ಕಾರ್ಯಕ್ರಮ : ಮಧ್ಯಾಹ್ನದವರೆಗಿನ ಸಭಾಕಾರ್ಯಕ್ರಮದಲ್ಲಿ ಅಷ್ಟೊಂದು ಉಲ್ಲಸಿತರಾಗಿರದ ಜನರು, ಮಧ್ಯಾಹ್ನದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತನ್ಮಯಚಿತ್ತರಾಗಿ ಪಾಲ್ಗೊಂಡರು. ಬೊಳ್ಳೂರು ಚಂದ್ರಮ್ಮ ಮತ್ತು ಮೂಲೆ ಮಜಲು ಚಿಣ್ಣಮ್ಮರವರು ವೇದಿಕೆಯಲ್ಲಿ ಕುಳಿತುಕೊಂಡೇ ಶೋಭಾನೆ ಹೇಳಿ ನಮ್ಮ ಸಂಸ್ಕೃತಿಯ ನೆನಪು ಮಾಡಿದರು. ಪರ್ಚನ ಗಾಯನ ಬೆಳ್ಯಪ್ಪ, ಬಾಳಕಜ್ಜೀರ ಶೇಷಗಿರಿ ಮಮತಾರವರ ಜಾನಪದ ಗೀತೆ ಸಭಿಕರನ್ನೂ ಮಂತ್ರಮುಗ್ಧರನ್ನಾಗಿಸಿದರೆ, ಬೈತಡ್ಕ ದೇವಮ್ಮ, ಮೊಣ್ಣಪ್ಪ, ಕಟ್ಟೆಮನೆ ಹೇಮಾಜನಾರ್ಧನರವರ ಭಾವಗೀತೆ ಸಭಿಕರನ್ನು ಭಾವನಾಲೋಕದಲ್ಲಿ ಮುಳುಗಿಸಿತು. ಮುಕ್ಕಾಟಿರ ಪೂಜಾ ಚಂಗಪ್ಪನವರ ಜಾನಪದ ನೃತ್ಯ, ಪೋತಂಡ್ರ ತೇಜಪ್ರಸಾದ ಮತ್ತು ತಂಡದವರ ಜಾನಪದ ಗೀತೆಗಳು ವೇದಿಕೆಗೆ ರಂಗು ಮೂಡಿಸಿದರೆ, ಪಾಂಡನ ಜಶ್ಮಿ ಪ್ರಕಾಶ್‌ರವರ ಚೈನಾಗೇಟ್ ನೃತ್ಯ, ಬಿದ್ರುಪಣೆ ರಂಜಿತ್ ಪೊನ್ನಪ್ಪನವರ ಡಿಸ್ಕೋಡ್ಯಾನ್ಸ್ ಪ್ರೇಕ್ಷಕರನ್ನು ಕರತಾಡನ ಮತ್ತು ಶಿಳ್ಳೆಗಳಿಗೆ ಪ್ರೇರೇಪಣೆ ನೀಡಿತು. ಕೊಂಪುಳಿರ ಪೊನ್ನಮ್ಮನವರ ಗಂಗೆಪೂಜೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಟ್ಟೆಮನೆ ಸೋನಾರವರು ನಿರೂಪಿಸಿದರು.

ಪಟ್ಟಡ ಶಿವಕುಮಾರ್

ಪ್ರಕೃತಿ

ಜುಳು ಜುಳು ನಾದಗೈಯುತ್ತ ಹರಿಯುತ್ತಿವೆ ನದಿಗಳು
ಚಿಲಿಪಿಲಿ ಸಂಗೀತವ ನುಡಿಸುತ್ತಿವೆ ಪಕ್ಷಿಗಳು
ವಿಶಾಲ ಸಾಗರದಲ್ಲಿ ರಾರಾಜಿಸುತ್ತಿವೆ ಅಲೆಗಳು
ನೀಲಿಯ ಬಾನಲಿ ಬೆಳ್ಳಿ ಮೋಡದ ಕಲೆಗಳು
ಜಗಕೆಲ್ಲಾ ಬೆಳಕು ಚೆಲ್ಲಿ ಹೊಳೆಯುವನು ಸೂರ್ಯ
ಅವನಂತೆ ನಿಷ್ಠೆಯಿಂದ ಯಾರು ಮಾಡುವರು ಕಾರ್ಯ
ಇರುಳಿನಲ್ಲಿ ನಕ್ಷತ್ರಗಳ ಜೊತೆ ಬರುವನು ಶಶಿ
ಚೆಲ್ಲುತ್ತ ಬೆಳಕಿನ ರಾಶಿ ರಾಶಿ
ಹಸಿರಿನಿಂದ ತುಂಬಿದೆ ದಟ್ಟಡವಿಗಳು
ಅದರಲ್ಲಿ ವಜ್ರಗಳಿಗೆ ಸಮಾನವಾದ ಮರಗಿಡಗಳು
ಇವು ಯಾವ ಕವಿಯ ಕಲ್ಪನೆಯ ಕೃತಿ
ಇದುವೇ ಭಗವಂತನು ಸೃಷ್ಟಿಸಿದ ಸುಂದರ ಪ್ರಕೃತಿ
ಪ್ರಕೃತಿಯ ಈ ಸೊಬಗನ್ನು ಕಂಡು ಹೋದೆ ನಾ ಸೋತು
ಇದರ ಸೌಂದರ್ಯವನ್ನು ನೋಡಿದೆ ಮೈ ಮರೆತು
ಪ್ರಕೃತಿಯ ವೈಭವವು ಹೊಳೆಯುವ ಹೊನ್ನಿನಂತೆ
ಇಂತಹ ಪ್ರಕೃತಿಯಲ್ಲಿರುವ ನಾನೇ ಪುಣ್ಯವಂತೆ

ಕಾಸ್ಪಾಡಿ ದೀಪಾ ಮೋನಪ್ಪ, ಬೆಂಗಳೂರು

31-10-1999ರಲ್ಲಿ ನೂತನ ನಿರ್ಮಿತ ಮರಗೋಡು ಗೌಡ ಸಮಾಜದ ಕೊಡುಗೈದಾನಿಗಳು

ಎಳಪದ ಸೋಮಣ್ಣ	1,00,101
ನೈಮನ ಪೊನ್ನಪ್ಪ	1,00,007
ಕುರುಂಜಿ ವೆಂಕಟರಮಣಗೌಡರು	1,00,000
ಮಂಡೀರ ದೇವಯ್ಯ	50,000
ತೋಟಂಬೈಲು ಈರಪ್ಪ	25,500
ಪುಳಕಂಡ್ರ ಮುತ್ತಪ್ಪ	25,500
ಕಟ್ಟೆಮನೆ ಗಣೇಶ	15,000
ಕಾಂಗೀರ ನಂಜುಂಡ	10,500
ಕೆದಂಬಾಡಿ ರಾಜು	10,007
ಕೊಂಪುಳೀರ ಪುಟ್ಟಯ್ಯ	10,006
ಪೇರಿಯನ ರತ್ನಾಕರ	10,005
ಚೆರಿಯಮನೆ ವಿಠಲ	10,002
ಐಯಂಡ್ರ ಪೂಣಚ್ಚ	10,001
ಗೌಡ ವಿದ್ಯಾ ಸಂಘ, ಮಡಿಕೇರಿ	10,000
ಕೂಡಕಂಡಿ ಸೋಮಣ್ಣ	10,000
ತೋಟಂಬೈಲು ನಾಣಯ್ಯ	10,000
ಮಂದ್ರೀರ ನಾಣಯ್ಯ	10,000
ಕಟ್ಟೆಮನೆ ಸೀತಮ್ಮ ಬೆಳ್ಯಪ್ಪ	10,000
ಕಾನಡ್ಕ ಅಣ್ಣಯ್ಯ	9,900
ಮಳ್ಳಂದಿರ ಲೂಸ್ವಪತಿ	8,500
ಕೋಚನದಾ ದಾಮೋದರ	8,500
ಬಡುವಂಡ್ರ ಪೂವಯ್ಯ	6.005
ಜೈನೀರ ವೆಂಕಟೇಶ	6,000
ಕಟ್ಟೆಮನೆ ಪ್ರಕಾಶ	5,551
ಕೋಚನ ಬೋಪಯ್ಯ	5,500
ಕರ್ಣಯ್ಯನ ಅಪ್ಪಚ್ಚ	5,400
ಪಾಂಡನ ಸೋಮಪ್ಪ	5,201
ಕಲ್ಲುಮುಟ್ಲು ಚೆನ್ನಬಸಪ್ಪ	5,050
ಮಂದ್ರೀರ ಗಣಪತಿ	5,025
ಮುಕ್ಕಾಟಿ ರಾಮಯ್ಯ	5,011
ಮುಕ್ಕಾಟಿ ಗೋಪಾಲ	5,010
ಬೈಮನ ಬೆಳ್ಯಪ್ಪ	5,005
ಪರಿಚನ ಪೊನ್ನಮ್ಮ ಕಾರ್ಯಪ್ಪ	5,005
ಕಾನಡ್ಕ ಪದ್ಮಾಜಿ	5,005
ಮುಕ್ಕಾಟಿರ ಉತ್ತಪ್ಪ	5,001
ಕೊಂಪುಳೀರ ಆನಂದ	5,001
ಕೇನೇರ ರಾಘವ	5,001
ದೇವಜನ ಚಂದ್ರಶೇಖರ	5,001
ಐಯ್ಯಂಡ್ರ ಉತ್ತಯ್ಯ	5,001
ಕೊಂಪುಳೀರ ದಿನೇಶ	5,001
ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಮಡಿಕೇರಿ	5,001

ಗೌಡ ಸಮಾಜ, ಭಾಗಮಂಡಲ	5,000
ಎನ್. ಎಸ್. ದೇವಿಪ್ರಸಾದ, ಪಾಣತಲೆ ಮಂದಪ್ಪ	5,000
ಪಾಣತಲೆ ಮಂದಪ್ಪ	5,000
ಕುಕ್ಕನೂರು ಸೋಮಣ್ಣ	5,000
ಪೇರಿಯನ ಚಿಣ್ಣಮ್ಮ ಪೂಣಚ್ಚ	5,000
ಪೇರಿಯನ ಸಾವಿತ್ರಿ	5,000
ಪೇರಿಯನ ಜಯಾನಂದ	5,000
ಕಾಂಗೀರ ಮುತ್ತಣ್ಣ	5,000
ಕಾಂಗೀರ ಪೂಣಚ್ಚ	5,000
ಕಾಂಗೀರ ಪೂವಮ್ಮ	5,000
ಮುಕ್ಕಾಟಿರ ಜನಾರ್ಧನ	5,000
ಪುಳಕಂಡ್ರ ಸಾವಿತ್ರಿ, ಮಕ್ಕಳು	5,000
ಕೊಂಪುಳೀರ ಬೋಪಯ್ಯ	5,000
ಮಳ್ಳಂದೀರ ಕಾರ್ಯಪ್ಪ	5,000
ಮಳ್ಳಂದೀರ ಕೃಷ್ಣರಾಜು	5,000
ಅಪ್ಪೆಯಂಡ್ರ ಪೊನ್ನಪ್ಪ	5,000
ಅಪ್ಪೆಯಂಡ್ರ ಸೋಮಣ್ಣ	5,000
ಕಟ್ಟೆಮನೆ ಗೋಪಾಲ	5,000
ಕಟ್ಟೆಮನೆ ಪೂವಯ್ಯ	5,000
ಕಟ್ಟೆಮನೆ ಲೋಕನಾಥ	5,000
ಕಟ್ಟೆಮನೆ ರಾಮಚಂದ್ರು	5,000
ಕಟ್ಟೆಮನೆ ಸಿದ್ಧಾರ್ಥ	5,000
ಕಟ್ಟೆಮನೆ ಮುರಳೀಧರ	5,000
ಕಟ್ಟೆಮನೆ ಅಣ್ಣಯ್ಯ	5,000
ಕಟ್ಟೆಮನೆ ಕಾರ್ಯಪ್ಪ	5,000
ಕೇನೇರ ಭೀಮಯ್ಯ	5,000
ಮಂಜಂಡ್ರ ಉತ್ತಯ್ಯ	5,000
ಬಡುವಂಡ್ರ ಈರಪ್ಪ	5,000
ಬಡುವಂಡ್ರ ಪೂವಯ್ಯ	5,000
ಕಾನಡ್ಕ ಅಪ್ಪಾಜಿ	5,000
ಚೆರಿಯಮನೆ ಕೃಷ್ಣಪ್ಪ	5,000
ಚೆರಿಯಮನೆ ಚಿಣ್ಣಪ್ಪ	5,000
ಚೆರಿಯಮನೆ ವೇಣುಗೋಪಾಲ	5,000
ಕೊಂಪುಳೀರ ಈರಪ್ಪ	5,000
ಕೊಂಪುಳೀರ ಪೊಣ್ಣಪ್ಪ	5,000
ಕೊಂಪುಳೀರ ರಾಮಣ್ಣ	5,000
ಐಯಂಡ್ರ ಅಚ್ಚಯ್ಯ	5,000
ಐಯಂಡ್ರ ಭೀಮಯ್ಯ	5,000
ಐಯಂಡ್ರ ಗಣೇಶ	5,000
ದೇವಜನ ನಾಣಯ್ಯ	5,000
ಕರ್ಣಯ್ಯನ ನಂಜಪ್ಪ	5,000

ಕರ್ಣಯ್ಯನ ಮೋಟಯ್ಯ	5,000
ಬೊಳ್ಳೂರು ಶ್ರೀನಿವಾಸ	5,000
ಬೆದುರುಪಾಣೆ ಬಸಪ್ಪ	5,000
ಪೊತಂಡ್ರ ನಾಗೇಂದ್ರ	5,000
ಪೆಳ್ಳಿಪುರ ಭರತ್	5,000
ಮಂಡೀರ ವಾಸಯ್ಯ	5,000
ಜೈನೀರ ರಾಮಯ್ಯ	5,000
ಪೋರ್ಕೈಯನ ಕುಶಾಲಪ್ಪ	5,000
ತುಂತಜೆ ವೆಂಕಟೇಶ್	5,000
ತಡಿಯಪ್ಪನ ಉತ್ತಯ್ಯ	5,000
ಪೈಕೇರ ಅನಂತರಾಮ್	5,000
ಪೈಕೇರ ಮಾದಪ್ಪ	5,000
ಬೊಳ್ಳೂರು ರಾಘವಯ್ಯ	5,000
ದಂಬೆಕೋಡಿ ಚಿಣ್ಣಪ್ಪ	5,000
ದಂಬೆಕೋಡಿ ಮುದ್ದಪ್ಪ	5,000
ದಂಬೆಕೋಡಿ ಪೂವಯ್ಯ	5,000
ಕುಕ್ಕನೂರು ಸೋಮಣ್ಣ	5,000
ಮಿತ್ತೂರು ಕಾರ್ಯಪ್ಪ	5,000
ಕೂಡಕಂಡಿ ಅಪ್ಪಾಜಿ	5,000
ದೊಲುಪಾಡಿ ರಮೇಶ	5,000
ಮಾಚಯ್ಯ ಮತ್ತು ಸಹೋದರರು	5,000
ಬಳಪದ ಹೇಮಾವತಿ	5,000
ಎಂ. ಎಸ್. ಸಹನಾ	4,900
ಕಾಂಗೀರ ಸುಬ್ಬಯ್ಯ	4,500
ಕರ್ಣಯ್ಯನ ಕೆಂಚಪ್ಪ	4,500
ಚೆರಿಯಮನೆ ಪೊನ್ನಪ್ಪ	4,700
ಬಡುವಂಡ್ರ ರಾಘವಯ್ಯ	4,000
ಕಾನಡ್ಕ ನಂಜಪ್ಪ	4,000
ಕೊಂಪುಳೀರ ಕೇಶವ	4,000
ಮುಕ್ಕಾಟೀರ ಬೆಳ್ಯಪ್ಪ	4,000
ಬಿದ್ರುಪಣೆ ನಾಣಯ್ಯ	3,500
ಮೂಟೇರ ಸರಸ್ವತಿ	3,500
ಪಂಜಿಪಟ್ಟ ರಾಧಾಕೃಷ್ಣ ಸುಶೀಲ	3,101
ಕೊಂಪುಳೀರ ಉಲ್ಲಾಸ	3,100
ಮಂದ್ರೀರ ಸೀತಮ್ಮ ಕೆಂಚಪ್ಪ	3,100
ಬೈಲೇರ ಪಾರ್ವತಿ ಮಂದಣ್ಣ	3,010
ಪರ್ಚನ ಬೆಳ್ಳಿಯಪ್ಪ	3,005
ಕರ್ಣಯ್ಯನ ಲೋಹಿತಾಶ್ವ	3,001
ಕರ್ಣಯ್ಯನ ಚಿಣ್ಣಪ್ಪ	3,001
ಗೌಡ ಮಹಿಳಾ ಒಕ್ಕೂಟ, ಮಡಿಕೇರಿ	3,001
ಕುಂಜಿಲನ ಬೆಳ್ಯಪ್ಪ ಮಾಚಯ್ಯ	3,001
ಸೂದನ ರಾಘವಯ್ಯ	3,001
ಪಾರೇರ ಎ. ಗಣಪತಿ	3,001
ಮುಕ್ಕಾಟಿರ ವೆಂಕಪ್ಪ	3,001
ಮೂಳಿಗೆ ಮನೆ ಕೃಷ್ಣಪ್ಪ ಮತ್ತು ಮಕ್ಕಳು	3,001
ಕೋಚನ ಗೋಪಾಲ	3,001
ಅಪ್ಪೆಯಂಡ್ರ ಬೆಳ್ಯಪ್ಪ	3,001
ಪಣಿಕಂಡ್ರ ಭೀಮಯ್ಯ	3,000
ಕಟ್ಟೆಮನೆ ಜನಾರ್ಧನ	3,000
ಕಟ್ಟೆಮನೆ ಕುಶಾಲಪ್ಪ	3,000
ಕಟ್ಟೆಮನೆ ಮಹಾಲಕ್ಷ್ಮಿ	3,000
ಬಿದ್ರುಪಣೆ ಉಲ್ಲಾಸ	3,000
ಬಿದ್ರುಪಣೆ ವಿಶ್ವನಾಥ	3,000
ಬಿದ್ರುಪಣೆ ಪೂವಯ್ಯ	3,000
ಕೆಂಜನ ಕೃಷ್ಣಪ್ಪ	3,000
ಕೆಂಜನ ಕೃಷ್ಣಪ್ಪ	3,000
ಯಾಲದಾಳು ಮಾದಪ್ಪ	3,000
ಮಳ್ಳಂದೀರ ಶಿವಯ್ಯ	3,000
ಚೆರಿಯಮನೆ ಜೀವರತ್ನ	3,000
ತೊಂಡೀರ ಕುಶಾಲಪ್ಪ	3,000
ಮೋಗೇರನ ಸೀತಮ್ಮ	3,000
ಬೊಳ್ಳೂರು ದೇವಯ್ಯ	3,000
ಕಾನಡ್ಕ ನಾಣಯ್ಯ	3,000
ಪರಿಚನ ಮುತ್ತಪ್ಪ	3,000
ಪರಿಚನ ಮೇದಪ್ಪ ಪೊನ್ನವ್ವ	3,000
ಪಾಮತಲೆ ಗೋಪಾಲ	3,000
ಪರ್ಲಕೋಟಿ ಕೆಂಚಪ್ಪ	3,000
ಕೊಂಪುಳೀರ ಲೂಸ್ಯಾಪತಿ	3,000
ಕೊಂಪುಳೀರ ಬಸಪ್ಪ	3,000
ಕೊಂಪುಳೀರ ಸುಬ್ಬಯ್ಯ	3,000
ಕಾಯೇರ ಧನಂಜಯಾ	3,000
ಬಾರಿಕೆ ಪೂಣಚ್ಚ	3,000
ಮುಕ್ಕಾಟಿರ ಚಂಗಪ್ಪ	3,000
ಪೈಕೇರ ನಂಜುಂಡ	3,000
ಪೆರುಬಾಯಿ ರಾಜಕುಮಾರ ಮತ್ತು ಸಹೋದರರು	3,000
ಬಡುಂವಂಡ ಮೋಹನ್	3,000
ಕಟ್ಟೆಮನೆ ಸೋಮಣ್ಣ	3,000
ಐಯಂಡ್ರ ಮೊಣ್ಣಪ್ಪ	3,000
ಕೊಲ್ಯದ ಸೋಮಯ್ಯ	3,000
ಹೊನ್ನಕೋಟೆ ಶಿವಣ್ಣ	3,000
ಚೀಯಂಡೀರ ಯಾದವ	3,000
ಪಾಂಡ ಮಂದಣ್ಣ	3,000
ಮೇಚನ ಕುಶಾಲಪ್ಪ	3,000
ತೋಟಂಬೈಲು ಮೋಹನ	3,000
ಪೇರಿಯನ ಪೂವಯ್ಯ	3,000
ತೊತ್ತಿಯನ ಮಂದಣ್ಣ	3,000

ಬಳಪದ ದೇವಯ್ಯ	3,000
ಕಟ್ಟೆಮನೆ ಪ್ರಭಾಕರ	2,500
ಪುಳಕಂಡ್ರ ಗಂಗಮ್ಮ ರಾಮಪ್ಪ	2,500
ಕೊಂಪುಳೀರ ಗಣಪತಿ	2,222
ಪಾರೇರ ಮುತ್ತಣ್ಣ	2,910
ದಂಬೆಕೋಡಿ ಸುಭಾಷ್	2,001
ಮುಕ್ಕಾಟಿರ ಕರುಂಬಯ್ಯ	2,001
ಪೊನ್ನಚ್ಚನ ರಾಘವಯ್ಯ	2,000
ಪಾಂಡನ ಕುಟ್ಟಪ್ಪ	2,000
ಬಡುವಂಡ್ರ ರಮೇಶ	2,000
ಬಿದ್ರುಪಣೆ ಪೊನ್ನಪ್ಪ	2,000
ಬಿದ್ರುಪಣೆ ಸೋಮಣ್ಣ	2,000
ಕಟ್ಟೆಮನೆ ಬೋಜಮ್ಮ ಸೋಮಯ್ಯ	2,000
ಕೊಂಪುಳೀರ ಮುತ್ತಪ್ಪ	2,000
ಪರ್ಚನ ಭೀಮಯ್ಯ	2,000
ಪೆಮ್ಮಟ್ಟೆ ತಮ್ಮಯ್ಯ	2,000
ಕುಯ್ಯಮುಡಿ ಪೂರ್ಣಯ್ಯ	2,000
ಮುಕ್ಕಾಟೀರ ಆನಂದ	2,000
ಕರ್ಣಯ್ಯನ ಪುಷ್ಪವೇಣಿ	2,000
ಕಾಳೆಯಂಡ್ರ ಚಿಣ್ಣಪ್ಪ	2,000
ಕಟ್ಟೆಮನೆ ಸುಬ್ಬಯ್ಯ	2,000
ಕಟ್ಟೆಮನೆ ಧನಂಜಯ	2,000
ಮುಕ್ಕಾಟೀರ ಬೆಳ್ಯಪ್ಪ	2,000
ಕಾಂಗೀರ ಶ್ರೀನಿವಾಸ	2,000
ಮಳ್ಳಂದೀರ ರವಿಕುಮಾರ್	2,000
ಕೊಂಪುಳೀರ ಗಣೇಶ ಬೋಪಯ್ಯ	2,000
ಪರ್ಚನ ಬೋಪಯ್ಯ	2,000
ದಂಬೆಕೋಡಿ ಅಪ್ಪಯ್ಯ	2,000
ಮಂಜಂಡ್ರ ರಾಮಚಂದ್ರ	2,000
ಪೊನ್ನಚ್ಚನ ಚೋಮಣಿ	2,000
ಕಾನಡ್ಕ ಅಪ್ಪಯ್ಯ	1,550
ಪಾಂಡನ ಪ್ರಕಾಶ್	1,500
ಪಾಂಡನ ಲೋಕನಾಥ	1,500
ಪಾಂಡನ ಪ್ರಕಾಶ್	1,500
ಕುಕ್ಕನೂರು ಸೋಮಣ್ಣ	1,500
ಪೈಕೇರ ಕುಮಾರ	1,500
ಕೊಂಪುಳೀರ ಪಳಂಗಪ್ಪ	1,500
ಚೀಯಪ್ಪನ ಆನಂದ	1,500
ಲಕ್ಕಂಡ ಬೆಳ್ಳಿಯವ್ವ	1,351
ಪರಿಚನ ನಂಜಮ್ಮ	1,300
ಗೌಡ ಸಮಾಜ	1,111
ನಡುವಟ್ಟೀರ ಸೀತಾರಾಮ	1,101
ಪರಿಚನ ಅಪ್ಪಯ್ಯ	1,100
ಬೊಳ್ಳೂರು ಚಂದ್ರಮ್ಮ	1,100
ಮುಕ್ಕಾಟಿರ ಉಲ್ಲಾಸ	1,100
ದಂಬೆಕೋಡಿ ಕೃಷ್ಣಪ್ಪ	1,100
ಪಾಣತಲೆ ಬಿದ್ದಪ್ಪ	1,017
ಊರುಬೈಲು ಜಯಪ್ರಕಾಶ್	1,015
ಬಳಪದ ಪೂವಯ್ಯ	1,011
ಬಿದ್ರುಪಣೆ ಪೂವಯ್ಯ	1,011
ಕೋಡಿ ನಂಜುಂಡ	1,005
ದೇರನ ರಾಮಯ್ಯ	1,002
ಮಂದ್ರೀರ ಐಯ್ಯಣ್ಣ	1,001
ಬಡುವಂಡ್ರ ಸೀತಮ್ಮ	1,001
ಕೊಂಪುಳೀರ ಚಂದ್ರಮ್ಮ	1,001
ಕೊಂಪುಳೀರ ಸೋಮಪ್ಪ	1,001
ಕೊಂಪುಳೀರ ಕಾಳಪ್ಪ	1,001
ಕೊಂಪುಳೀರ ಅಪ್ಪಾಜಿ	1,001
ತೋಂಡೀರ ಬಿದ್ದಪ್ಪ	1,001
ಪರ್ಲಕೋಟಿ ಭರತ	1,001
ಮಳ್ಳಂದೀರ ಶೇಷಗಿರಿ	1,001
ಮಡ್ತಲೆ ಅಮ್ಮವ್ವ	1,001
ದೋಪಾಡಿ ಬಾಲಸುಬ್ರಮಣ್ಯ	1,001
ದಂಬೆಕೋಡಿ ತಮ್ಮಯ್ಯ	1,001
ಅಂಚೆಮನೆ ಜಯ ನಂಜುಂಡ	1,001
ಪಣಿಕಂಡ್ರ ತಿಮ್ಮಯ್ಯ	1,001
ಕರ್ಣಯ್ಯನ ಪ್ರಕಾಶ್	1,001
ಕುಕ್ಕನೂರು ಪದ್ಮನಾಭ	1,001
ಕುಕ್ಕನೂರು ಈರಪ್ಪ	1,001
ಕುಕ್ಕನೂರು ಅಪ್ಪಚ್ಚ	1,001
ತುಂತಜೆ ನಾಗೇಶ	1,001
ಪೈಕೇರ ದೇವಯ್ಯ	1,001
ತೆಕ್ಕಡ ಪೂವಮ್ಮ ಬೆಳ್ಯಪ್ಪ	1,001
ತೆಕ್ಕಡೆ ಗಣಪತಿ	1,001
ಹುದೇರಿ ನಾಗೇಂದ್ರ	1,001
ಮಿತ್ತೂರು ಗಣೇಶ್	1,001
ಪುಳಕಂಡ ಪೂವಯ್ಯ	1,001
ಚೆಟ್ಟಿಮಾಡ ಶಿವಯ್ಯ	1,001
ಅಂಡಪಂಗಾಯ ಉಮಾನಾಥ್	1,001
ಅಡಂಪಂಗಾಯ ಭಾಸ್ಕರ	1,001
ಬೊಳ್ಳೂರು ಶಾಂತ ಕುಮಾರ್	1,000
ಕೊಂಪುಳೀರ ಗೋಪಾಲ	1,000
ಪೇರಿಯನ ಕೇಶವ	1,000
ಬಡುವಂಡ್ರ ಪೂವಮ್ಮ	1,000
ಅಂಬೆಕಲ್ಲು ಕುಶಾಲಪ್ಪ	1,000
ಬೈತಡ್ಕ ದೇವಮ್ಮ ಮೊಣ್ಣಪ್ಪ	1,000

ಕೊಂಪುಳೀರ ಉತ್ತಪ್ಪ	1,000
ಕೊಟ್ಟುಕೇರಿಯನ ದೇವಯ್ಯ	1,000
ಪಾಂಡನ ಸುಬ್ರಮಣಿ	1,000
ಪಾಣತಲೆ ತಮ್ಮಯ್ಯ	1,000
ಮುಕ್ಕಾಟೀರ ಪುರುಷೋತ್ತಮ	1,000
ಉಳುವಾರನ ಸುಬ್ಬಯ್ಯ	1,000
ಪರಿಚನ ರಾಮಪ್ಪ	1,000
ಪರಿಚನ ಕುಟ್ಟಪ್ಪ	1,000
ಪರಿಚನ ವಿಶ್ವನಾಥ	1,000
ಸೂದನ ಹೇಮ ಕುಮಾರ	1,000
ಸೂದನ ಜಾಜಯ್ಯ	1,000
ಕಾನಡ್ಕ ಸೋಮಯ್ಯ	1,000
ಕಾನಡ್ಕ ಆನಂದ	1,000
ಕಾನಡ್ಕ ದಾಮೋದರ	1,000
ಕೊಂಪುಳೀರ ಮುತ್ತಪ್ಪ	1,000
ಕೊಂಪುಳೀರ ಗಂಗಮ್ಮ ಬೆಳ್ಯಪ್ಪ	1,000
ಕೊಂಪುಳೀರ ಗೋಪಾಲಕೃಷ್ಣ	1,000
ಕೊಂಪುಳೀರ ಸುಬ್ಬಯ್ಯ	1,000
ಕೊಂಪುಳೀರ ಡಿಸೋಜಾ	1,000
ತೋಡೀರ ಶಿವಯ್ಯ	1,000
ತೋಡೀರ ಪೊನ್ನಪ್ಪ	1,000
ಪುಳಕಂಡ್ರ ಬೆಳ್ಳಿಯವ್ವ ನಂಜುಂಡ	1,000
ಮುಕ್ಕಾಟಿರ ಬೆಳ್ಯಪ್ಪ	1,000
ಮುಕ್ಕಾಟಿರ ಗಣೇಶ	1,000
ಬೆಳ್ಳೂರು ರಾಘವ	1,000
ಬಳಪದ ಸೋಮಯ್ಯ	1,000
ಬಳಪದ ಈರಪ್ಪ	1,000
ಪಾಣತಲೆ ರಾಮಯ್ಯ	1,000
ಪಾಣತಲೆ ಬಾಲಕೃಷ್ಣ	1,000
ಪಾಣತಲೆ ನಂಜುಂಡ	1,000
ಪಾಣತಲೆ ನಂಜಪ್ಪ (ರಾಧ)	1,000
ಬಿದ್ರುಪಾಣೆ ವಿಶ್ವನಾಥ	1,000
ಬಿದ್ರುಪಾಣೆ ಬಿದ್ದಪ್ಪ	1,000
ವೈ. ರಾಮಪ್ಪ	1,000
ಆರ್. ವಿಶ್ವನಾಥ	1,000
ಮೊಗೇರನ ನಂಜುಂಡ	1,000
ಐಯಂಡ್ರ ದೇವರಾಜ್	1,000
ಚೋಂದನ ತಮ್ಮಯ್ಯ	1,000
ಮಳ್ಳಂದೀರ ವಾಸುದೇವ	1,000
ಹೊಸಕ್ಕೊಲು ಬಿದ್ದಪ್ಪ	1,000
ಇಟ್ಟಣಿಕೆ ಉಲ್ಲಾಸ	1,000
ಇಟ್ಟಣಿಕೆ ಬೋಪಯ್ಯ	1,000
ಚೆರಿಯಮನೆ ಧನಂಜಯ	1,000
ಮೂಡಗದ್ದೆ ಜಾಜಮ್ಮ	1,000
ಪೇರಿಯನ ಪ್ರಕಾಶ	1,000
ಮಂಡೀರ ಭುವನೇಶ್ವರ	1,000
ಮಂದ್ರೀರ ಮಂದಣ್ಣ ಪೊನ್ನಪ್ಪ	1,000
ಮಂದ್ರೀರ ಅಚ್ಚಯ್ಯ	1,000
ಕೊಡೆಕಲ್ಲು ಕುಶಾಲಪ್ಪ	1,000
ಕೊಡೆಕಲ್ಲು ನಂಜಮ್ಮ	1,000
ದಂಬೆಕೋಡಿ ಸುಕುಮಾರ	1,000
ಅಂಚೆಮನೆ ವಿಶ್ವನಾಥ	1,000
ಕರ್ಣಯ್ಯನ ಕುಂಜಪ್ಪ	1,000
ಕರ್ಣಯ್ಯನ ಸುರೇಶ	1,000
ಕುಕ್ಕನೂರು ಗಣಪತಿ	1,000
ಬಾಳೇಡಿ ಮಾದಪ್ಪ	1,000
ಪರ್ಲಕೋಟಿ ಗೋಪಾಲ	1,000
ಬಳ್ಳಡ್ಕ ಕಾವೇರಮ್ಮ	1,000
ತೆಕ್ಕಡೆ ಸೋಮಯ್ಯ	1,000
ತೆಕ್ಕಡೆ ಮೊನ್ನಪ್ಪ	1,000
ಕೊಲ್ಯದ ರಾಮಪ್ಪ	1,000
ಕೈಬಿಲಿರ ಸೋಮಣ್ಣ	1,000
ಚೆಟ್ಟಿಮಾಡ ಅಣ್ಣಪ್ಪ	1,000
ಕುಯ್ಯುಮುಡಿ ರಾಮಯ್ಯ	1,000
ಮರ್ಕಂಡ ಲಿಂಗಪ್ಪ	1,000
ಪಡಿಕಲ್ಲು ಚಂಗಪ್ಪ	1,000
ಹೊಸೂರು ತೇಜೇಶ್ವರ	1,000
ಪಾರೇರ ಚಂಗಪ್ಪ	1,000
ಪಾರೇರ ಗುಂಡಪ್ಪ	1,000
ಕಲ್ಲುಮುಟ್ಲು ಚಂಗಪ್ಪ	901
ಪರ್ಚನ ಪಳಂಗಪ್ಪ	900
ಚೆರಿಯಮನೆ ಉದಯಕುಮಾರ್	700
ಕೊಂಪುಳೀರ ಕುಮಾರಪ್ಪ	550
ಸೂದನ ನಾಣಯ್ಯ	510
ಶಿರಕಜೆ ಚಿಣ್ಣಪ್ಪ	501
ಕೂಡಕಂಡಿ ಮಂದಣ್ಣ	501
ಕಟ್ಟೆಮನೆ ಇಂದ್ರೇಶ	501
ಕಾಂಗೇರಿರ ಆನಂದ	501
ಮಡ್ತಲೆ ನಾಣಯ್ಯ	501
ಹೊಸಮನೆ ಪೂವಯ್ಯ	501
ಕುಕ್ಕನೂರು ಸುಬ್ಬಯ್ಯ	501
ತುಂತಜೆ ಲಲಿತಮ್ಮ	501
ಅಪ್ಪೆಯಂಡ್ರ ಕಮಲ	500
ಕೇನೇರ ಮಂದಣ್ಣ	500
ಕೇನೇರ ಪ್ರಕಾಶ	500
ಕಾಂಗೀರ ಧನಂಜಯ	500

ಕೋಚನ ಉಲ್ಲಾಸ	500
ಕೋಚನ ಜಾನಕಿ	500
ಕೊಂಪುಳೀರ ಸೀತಮ್ಮ	500
ಕೊಂಪುಳೀರ ಉತ್ತಯ್ಯ	500
ತೊಂಡೀರ ವಸಂತ	500
ಪಾಣತಲೆ ಮಾಚಯ್ಯ	500
ಕಾಂಗೀರ ಪೆಮ್ಮಯ್ಯ	500
ದೇವಜನ ಮಾದಪ್ಪ	500
ಕಾನಡ್ಕ ನಾಗೇಂದ್ರ	500
ಕಾನಡ್ಕ ಉಲ್ಲಾಸ	500
ಮೊಗೇರನ ಮೊಣ್ಣಪ್ಪ	500
ಬಡುವಂಡ್ರ ತಮ್ಮಯ್ಯ	500
ಬಡುವಂಡ್ರ ಮೊಣ್ಣಪ್ಪ	500
ಬಡುವಂಡ್ರ ಮೊಣ್ಣಪ್ಪ	500
ಚೆರಿಯಮನೆ ದಾಮೋದರ	500
ಚೆರಿಯಮನೆ ರಾಮಚಂದ್ರ	500
ಇಟ್ಟಣಿಕೆ ಬೆಟ್ಟಿಯಪ್ಪ	500
ಇಟ್ಟಣಿಕೆ ಲೀಲಾವತಿ	500
ನಂಗಾರು ಸೀತರಾಮ	500
ಕಟ್ಟೆಮನೆ ವಿಠಲ	500
ಮುಕ್ಕಾಟಿರ ಅಮ್ಮಣ್ಣಿ	500
ಬಿರುಮಕ್ಕಡ ಮುತ್ತಪ್ಪ	500
ಕೊಳಂಬೇರ ಯಾದವ	500
ಕೊಡೆಕಲ್ಲು ಅಮ್ಮವ್ವ	500
ಹೊಸೂರು ಐಯ್ಯಪ್ಪ	500
ಕುಕ್ಕನೂರು ಗೌರಮ್ಮ ಕಾಳಪ್ಪ	500
ಕುಕ್ಕನೂರು ಬಾಲಕೃಷ್ಣ	500
ಕಾಳೆಯಂಡ ಪೂವಯ್ಯ	500
ಸೂದನ ನಂಜುಂಡ	500
ಕಮಲಮ್ಮ ನಾಣಯ್ಯ	500
ತೆಕ್ಕಡೆ ರಮೇಶ	500
ಮೂಟೇರ ಜಿ. ಚಂದ್ರಮ್ಮ	500
ಚಿಯಂಡೀರ ಪಾಪಯ್ಯ	500
ಪೊನ್ನಚ್ಚನ ಕಾಳಪ್ಪ	500
ಜಪ್ಪೆಕೋಡಿ ಐಯ್ಯಪ್ಪ	500
ಬೊಳ್ಳಜ್ಜೀರ ಬಸಪ್ಪ	500

ವಿಶೇಷ ಸೂಚನೆ : ಮೇಲೆ ಕಾಣಿಸಿದ ದಾನಿಗಳ ಹೆಸರು ಮತ್ತು ಮೊಬಲಗಿನಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಯಾ ಹೆಸರು ಮತ್ತು ಮೊಬಲಗು ಬಿಟ್ಟು ಹೋಗಿದ್ದಲ್ಲಿ ದಯವಿಟ್ಟು ಕೂಡಲೆ ತಿಳಿಸುವುದು.

ರೂ. 1000-00 ಕ್ಕೆ ಮೇಲ್ಪಟ್ಟ ದಾನಿಗಳ ಹೆಸರನ್ನು ಶಿಲಾ ಕಲ್ಲಿನಲ್ಲಿ ಕೆತ್ತಿಸಲು ಸದ್ರಿ ಆಡಳಿತ ಮಂಡಳಿಯವರು ತೀರ್ಮಾನಿಸಿದ್ದು, ದಾನಿಗಳು ಮೇಲ್ಕಂಡ ಮೊಬಲಗನ್ನು ಉಳಿಕೆ ಇದ್ದಲ್ಲಿ ಶೀಘ್ರವಾಗಿ ನೀಡುವಂತೆಯೂ ಅಲ್ಲದೆ ತಾರೀಕು 31-3-2000 ಒಳಗೆ ಪಾವತಿಸುವಂತೆಯೂ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರನ್ನು ಸಂಪರ್ಕಿಸಲು ಈ ಮೂಲಕ ಕೋರಲಾಗಿದೆ.

ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ.

ಪೂಜೆ

ನಿಜವಾದ ಪೂಜೆ, ಅರ್ಚನೆ ಎಂದರೆ ದೇವರಿಗೆ ಅತ್ಯಂತ ಶ್ರದ್ಧೆಯಿಂದ, ಅಂತಃಕರಣಪೂರ್ವಕ ನಾವೇ ಸ್ವತಃ ಮಾಡುವ ಮನೋಭಾವ ಸಮರ್ಪಣಾ. ಅದು ಇನ್ನೊಬ್ಬರಿಗೆ ವಹಿಸಿಕೊಡುವ, ನಮ್ಮ ಪರವಾಗಿ ಇನ್ನೊಬ್ಬರು ಮಾಡುವ ಸಂಗತಿ ಅಲ್ಲವೇ ಅಲ್ಲ.

ದೇಹ ಮತ್ತು ಮನಸ್ಸುಗಳನ್ನು ಶುದ್ಧಗೊಳಿಸುವುದೇ ಪೂಜೆಯಪರಮ ಉದ್ದೇಶ. ಪೂಜೆಯನ್ನು ಯಾರೂ ಮಾಡಬಹುದು. ಅದು ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯ.

ಕಬ್ಬೀರ ಸುಕನ್ಯ ಯಶೋಧಕುಮಾರ್, ಬೆಂಗಳೂರು

ಪ್ರಶ್ನೆ

ವಿಶ್ವಾಸದ್ರೋಹಿ ಪಾಕಿಸ್ತಾನಿಯರ್ನ
ಸೋಲಿಸಿದ ನಮ್ಮವುಕೆ!
ದೇಶದ್ರೋಹಿ ವೀರಪ್ಪನ್‌ನ
ಸೋಲಿಸಿಕಾತ್ಲೇಲ ಯಾಕೆ!?


ಯಾಲಾದಾಳು ದಿನೇಶ್ ಲಕ್ಷ್ಮಣ್, ಗಾಳಿಬೀಡು

ಕೊಡಗು ಸಂಗಾತಿ

ಓ ಗೆಳತಿ
ನಿನ್ನನು ಕಂಡರೆ ಅದೆಷ್ಟೊ ಪ್ರೀತಿ
ಪಡೆಯಬೇಕು ನೀನು ಬಲು ಖ್ಯಾತಿ
ಇದನ್ನೇ ಸಾರುವೆನು ನಾವು ಎಲ್ಲೆಡೆ
ಪಡಬೇಡ ನೀನು ಭಯದ ಭೀತಿ
ನೋಡಿ ಕಲಿಯುವೆವು ನಿನ್ನಲಿರುವ ನೀತಿ
ಮಾಡಿ ತೋರಿಸುವೆವು ನೀ ಹೇಳುವ ರೀತಿ
ಮರೆಯಲಾರೆವು ನೀ ಹೇಳುವ ಸಂಸ್ಕೃತಿ
ನಿನ್ನನ್ನು ನೋಡಿ ಪಡುತ್ತಿರುವೆ ಫಜೀತಿ
ಓದಿದ ಮೇಲೆಯೇ ಮನಸ್ಸಿಗೆ ಶಾಂತಿ
ಮಾಡಿಕೊಳ್ಳಬೇಕೆಂದಿರುವೆ ನಿನ್ನನೇ "ಬಾಳ ಸಂಗಾತಿ"
ಸದ್ಯಕ್ಕೆ ನೀನಾಗಿರು ನನ್ನ ನೆಚ್ಚಿನ "ಕೊಡಗು ಸಂಗಾತಿ"

ಅಣ್ಣೀರಾ ಭಾರತಿ ಸೋಮಣ್ಣ, ಮಕ್ಕಂದೂರು ಗ್ರಾಮ

ಸರ್ಪ ಗಂಧ



✦ ಕೌಂಡಿನ್ಯ

ಧಾರವಾಹಿ -18

ಅದು ಈಶ್ವರ ದೇವಸ್ಥಾನ !

ಅದೇ ತಾನೇ ಪೂಜೆ ಮುಗಿದು ಯುವಕ ಪೂಜಾರಿ ಗರ್ಭಗುಡಿಯ ಬಾಗಿಲನ್ನು ಹಾಕಿಕೊಂಡನು.

ರೇವತಿ ಅಲ್ಲಿಗೆ ಬಂದಳು.

ಪೂಜಾರಿ "ರೇವತಿ...... ದೇವರನ್ನು ನೋಡಲು ಬಂದೆಯಾ?"

ರೇವತಿ ನಗುತ್ತಾ "ಅಲ್ಲ, ಪೂಜಾರಿಯನ್ನು ನೋಡಲು"

"ಏನಾದರೂ ಕೇಳಬೇಕಿತ್ತೆ?"

ರೇವತಿ ತಲೆಯಾಡಿಸಿದಳು.

ಪೂಜಾರಿ ಮತ್ತು ರೇವತಿ ಈಗ ಎದುರು ಬದುರಾಗಿ ದೇವಸ್ಥಾನದ ಕಲ್ಲುಹಾಸಿನ ಮೇಲೆ ಕುಳಿತುಕೊಂಡರು.

ಪೂಜಾರಿ ಕಾಯಿ ಚೂರು, ಬಾಳೆಹಣ್ಣು ನೀಡಿದನು !

ರೇವತಿ ಅದನ್ನು ತಿನ್ನುತ್ತಾ "ನನ್ನ ಗೆಳತಿ ಮೀನ ಸತ್ತ ರೀತಿಯಲ್ಲೇ ಅರೆ ಹುಚ್ಚ ಮಂಜಯ್ಯ ಸತ್ತಿದ್ದಾನೆ"

ಪೂಜಾರಿ ತಲೆಯಾಡಿಸಿದನು.

"ಈ ಎರಡು ಸಾವುಗಳು ಒಂದೇ ರೀತಿಯಲ್ಲಿ ಸಂಭವಿಸಿದೆ. ಸಾವು ಎನ್ನುವುದಕ್ಕಿಂತ ಕೊಲೆ ಅನ್ನಬೇಕು"

ಪೂಜಾರಿ ಗಾಬರಿಯಿಂದ "ರೇವತಿಯವರೆ.... ನೀವು.... ನೀವು ಏನು ಹೇಳ್ತಾ ಇದ್ದೀರ?"

"ಇದೊಂದು ರೀತಿಯ ಕೊಲೆ !"

"ಹಾಗೆ ಹೇಳಲು ಕಾರಣವೇನು?"

ರೇವತಿ "ಹುತ್ತದ ಹತ್ತಿರ ಊರಿನ ಜನಗಳು ಸಹ ನಿಂತಿದ್ದರು. ಆದರೆ ಹಾವುಗಳು ಬರೀ ಮಂಜಯ್ಯನ ದೇಹಕ್ಕೆ ಮಾತ್ರ ಯಾಕೆ ಸುತ್ತಿಕೊಂಡವು?"

ಪೂಜಾರಿ ಗಾಬರಿಯಿಂದ "ಬಹುಶ.... ಮಂಜಯ್ಯ ಅದೇನೊ ಅಪಚಾರ ಮಾಡಿರಬೇಕು. ನಾಗರ ಹಾವಿಗೆ ಅಪಚಾರ ಆದರೆ ಅದು ಬಿಡುತ್ತದೆಯೆ?"

ರೇವತಿ ನಗಲಾರಂಭಿಸಿದಳು.

ಪೂಜಾರಿ ಪೆಚ್ಚಾದನು !

ರೇವತಿ "ನಿಮ್ಮ ವೃತ್ತಿಗೆ ತಕ್ಕಂತೆ ಮಾತಾಡುತ್ತಿದ್ದೀರ ಅಲ್ವ. ನೀವು ಅಲ್ಲಿನ ದೃಶ್ಯ ನೋಡಲಿಲ್ಲವೆ?"

ಮೆಲ್ಲಗೆ "ನೋಡಿದೆ"

"ಮಂಜಯ್ಯನ ದೇಹಕ್ಕೆ ಸುತ್ತಿಕೊಂಡಿದ್ದು ಬರೀ ನಾಗರ ಹಾವುಗಳಲ್ಲ, ಕೇರೆ ಹಾವು, ಕೊಳಕು ಮಂಡಲ ಸಹ ಇತ್ತು !"

ಪೂಜಾರಿ ಉತ್ತರಿಸದಾದನು.

ರೇವತಿ "ನೀವು ಹೇಳುವ ಚಂದಾಮಾಮನ ಕತೆಗಳನ್ನು ನಂಬುವ ಹೆಣ್ಣಲ್ಲ ನಾನು. ನಡೆಯುವುದರ ಬಗ್ಗೆ ಸ್ವಲ್ಪ ತರ್ಕಬದ್ಧವಾಗಿ ಆಲೋಚಿಸಿ"

"ಅಂದರೆ ನೀವು ಹೇಳುವುದು....."

ರೇವತಿ "ತುಂಬಾ ಬುದ್ಧಿವಂತಿಕೆಯಿಂದ ಯಾರೋ ಇದರ ಹಿಂದೆ ನಿಂತುಕೊಂಡು ಆಡಿಸುತ್ತಿದ್ದಾರೆ"

ಪೂಜಾರಿ ಗಾಬರಿಯಿಂದ "ಯಾರು.... ಯಾರದು?"

"ಈಗಲೇ ಅದನ್ನು ಹೇಳಲಾರೆ"

"ನಿನಗೆ ಯಾರ ಬಗ್ಗೆಯಾದರೂ ಅನುಮಾನ ಬಂದಿದೆಯ ರೇವತಿ" ಎಂದು ಏಕ ವಚನದಲ್ಲಿ ಕೇಳಿದನು.

ರೇವತಿ ತಲೆಯಾಡಿಸಿದಳು.

"ಯಾರು...... ಯಾರದು?"

"ಪ್ರಸನ್ನ......?!"

ಪೂಜಾರಿ ಕೂಡಲೇ ಉತ್ತರಿಸಲಿಲ್ಲ. ನಂತರ "ರೇವತಿ.... ಮೇಲು ನೋಟಕ್ಕೆ ಕಾಣುತ್ತಿರುವುದೇ ಸತ್ಯ ಅಲ್ಲ."

"ಅಂದರೆ ನಿಮ್ಮ ಅಭಿಪ್ರಾಯ"

ಪೂಜಾರಿ "ಕೆಲವು ಸಮಯ ಸಾಂದರ್ಭಿಕ ಸಾಕ್ಷಿಗಳು, ಆಧಾರಗಳು ಸತ್ಯವನ್ನು ಮುಚ್ಚುತ್ತದೆ."

ರೇವತಿ ವ್ಯಂಗ್ಯವಾಗಿ "ಓ.... ಪ್ರಸನ್ನ ನಿರಪರಾಧಿ ಅಂತ ತಮ್ಮ ಅಭಿಪ್ರಾಯವೇ"

"ಖಂಡಿತಾ ಅಲ್ಲ"

"ಮತ್ತೇನು?"

"ಪ್ರಸನ್ನ ಅಪರಾಧಿ ಆಗಿರಬಹುದು. ಆದರೆ ಅದನ್ನೇ ಮನಸ್ಸಿನ ತುಂಬಾ ತುಂಬಿಕೊಂಡು ಪ್ರಯತ್ನಿಸಿದ ಸತ್ಯದ ಶೋಧನೆ ಆಗುವುದಿಲ್ಲ"

ರೇವತಿ ಗಂಭಿರವಾಗಿ "ನಾನು..... ನಾನು ಪೂರ್ವಭಾವಿ ಅನಿಸಿಕೆಗಳೊಂದಿಗೆ ಶೋಧನೆ ಮಾಡೊಲ್ಲ. ಸಾಕ್ಷಿ ಆಧಾರಗಳನ್ನು ಅವಲಂಬಿಸಿ ಸತ್ಯ ಹುಡುಕುತ್ತೇನೆ."

ಪೂಜಾರಿ ಗಂಭೀರವಾಗಿ "ದುಡುಕಬೇಡ. ಈ ಪ್ರಯತ್ನದಲ್ಲಿ ನಿನಗೆ ಅಪಾಯ ಎದುರಾದರೆ?"

"ಎದುರಿಸಲು ಸಿದ್ಧಳಿದ್ದೇನೆ"

ಪೂಜಾರಿ "ನಿನಗೇಕೆ ಇಂತಹ ಹಟ?"

"ಗೆಳತಿಯ ಸಾವಿನ ರಹಸ್ಯ ಗೊತ್ತಾಗಬೇಕು. ಅದಕ್ಕೆ ಊರಿಗೂ ಸಹ ಹೋಗದೆ ಇಲ್ಲೆ ಉಳಿದಿದ್ದೇನೆ."

ಪೂಜಾರಿ ಮೆಚ್ಚುಗೆಯಿಂದ ಅವಳ ಕಡೆ ನೋಡುತ್ತಾ "ನಿನ್ನ ಧೈರ್ಯ, ಸಾಹಸ ಮೆಚ್ಚಲೇಬೇಕು. ಗುಡ್‌ಲಕ್"

"ಬರೀ ಬಾಯಲ್ಲಿ ಗುಡ್‌ಲಕ್ ಹೇಳಿದರಾಯಿತೆ!"


20ನೇ ಪುಟಕ್ಕೆ

ಇಲ್ಲಿಯವರೆಗೆ.........

ಮಂಜಯ್ಯನ ಶವ ಸಂಸ್ಕಾರ ಮುಗಿಯುತ್ತವೆ. ಈಗ ಪ್ರಸನ್ನನಿಗೆ ಅಕ್ಕ, ಅಣ್ಣಂದಿರ ಮೇಲೆ ಸಂದೇಹ ಬರುತ್ತದೆ. ಅವರುಗಳಿಗೆ ಪ್ರಸನ್ನ ಎಚ್ಚರಿಕೆ ನೀಡುತ್ತಾನೆ. ಅರುಂಧತಿ ತನ್ನ ಸಹೋದರ ಪ್ರಸನ್ನನನ್ನು ನಿಗೂಢ ರೀತಿಯಲ್ಲಿ ಕೊಲೆ ಮಾಡಲು ಬುದ್ಧಿವಂತಿಕೆಯಿಂದ ಪ್ಲಾನ್ ಮಾಡುತ್ತಾಳೆ.

ಮುಂದೆ ಓದಿ..........

ಪತ್ರ ವಿಭಾಗ :



ಮಾನ್ಯರೆ,

ಕಳ್ದ ಸಂಚಿಕೆಲಿ ಕಡ್ನೆರ ಚಿಣ್ಣಪ್ಪನವರ 'ಯುದ್ಧದ ಕಹಿ ಅನುಭವ' ಓದಿ ಮೈ ನಡ್ಗಿತ್! ಶ್ರೀ ಚಿಣ್ಣಪ್ಪನವರಂತ ನೂರಾರ್ ಯೋಧರ್ ಕೊಡಗ್‌ಲಿವಳೊ. ಎರಡನೆ ಮಹಾಯುದ್ಧ, ಚೀನಾಯುದ್ಧ, ಪಾಕಿಸ್ತಾನ ಯುದ್ಧದಂತ ಬೇರೆ ಬೇರೆ ಯುದ್ಧಗಳಲ್ಲಿ ಭಾಗವಹಿಸಿ ಬಂದ ಸಮರ ವೀರರ ಅನುಭವಗಳ ಸಂಗ್ರಹಿಸಿ ಪ್ರಕಟ ಪಡ್ಸಿರೆ ಮುಂದಿನ ಜನಾಂಗಕ್ಕೆ ಅದೊಂದು ಅಮೂಲ್ಯ ನಿಧಿಯಾಗಿ ಉಳ್ದದೆ. ಇಂತಹ ಯೋಧರ್ ಇರುವ ಮನೆ ಕಂಡ್ ಹಿಡ್ದ್ ಅವರ ಕಾಲ್‌ಬುಡಕ್ಕೆ ಹೋಗಿ ಅವರ ಅನುಭವಗಳ ಸಂಗ್ರಹಿಸುವ ಕಾರ್ಬಾರ್ ಯುವಕ ಯುವತಿಯರ್ ಮಾಡಕು. ಅಂತ ಕಥೆಗಳ ಹೆಚ್ಚಿನ ಸಂಖ್ಯೆಲಿ ಪ್ರಕಟಿಪಡ್ಸೊಕುತ ಕೊಡಗು ಸಂಗಾತಿನ ಕೇಳಿಕನ್.

ಬಾಚರಣಿಯಂಡ ಅಪ್ಪಣ್ಣ

ಕೊಡಗು ಸಂಗಾತಿ ನಿಜಕ್ಕೂ ಒಂದು ಉತ್ತಮ ಪತ್ರಿಕೆಯಾಗಿ ಮೂಡಿ ಬರುತ್ತಿದೆ. ನಿಮ್ಮ ಉತ್ಸಾಹಕ್ಕೆ, ಬುದ್ಧಿವಂತಿಕೆಗೆ ಅಭಿನಂದನೆಗಳು.

ನಿಮ್ಮ ಪತ್ರಿಕೆಯ ಇನ್ನೊಂದು ವಿಶೇಷತೆ ಎಂದರೆ ಕಾಗುಣಿತವನ್ನು ಸ್ವಲ್ಪವೂ ತಪ್ಪಾಗದಂತೆ ಪ್ರಕಟಿಸುವುದು. ಅರೆಭಾಷೆ ಹೊಸ ಕನ್ನಡಕ್ಕಿಂತ ಕಷ್ಟಕರವಾದ ಬರವಣಿಗೆ. ಅದನ್ನು ಸ್ವಲ್ಪವೂ ತಪ್ಪಾಗದಂತೆ ಪ್ರಕಟಿಸುವುದು ನಿಮ್ಮ ಜಾಣತನ. ನಾವು ಕಳಿಸಿದ ಲೇಖನಗಳು ತಪ್ಪು ತಪ್ಪಾಗಿ ಮುದ್ರಿತಗೊಂಡಿದ್ದರೆ, ಮನಸ್ಸಿಗೆ ಬಹಳ ಬೇಸರವಾಗುತ್ತದೆ. ನೀವು ಇದರ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸುತ್ತಿದ್ದೀರಿ. ನಿಮ್ಮ ಪತ್ರಿಕೆಯ ಅಭ್ಯುದಯಕ್ಕೆ ಎಂದೆಂದೂ ನಮ್ಮ ಸಹಕಾರವಿದೆ. ಕೊನೆಯ ಪುಟಕ್ಕೆ ಬರುತ್ತಿದ್ದಂತೆ ಇನ್ನೂ ಒಂದೆರಡು ಹಾಳೆ ಹೆಚ್ಚಿಗೆ ಇದ್ದಿದ್ದರೆ ಚೆನ್ನಾಗಿತ್ತು, ಎನ್ನುವ ಭಾವನೆ ಸಹಜವಾಗಿ ಉಂಟಾಗುತ್ತದೆ. ನಿಮ್ಮಿಂದ ಅದು ಆದಷ್ಟು ಬೇಗ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ಕು. ಕಟ್ರತನ ಝಾನ್ಸಿ ದೇವಯ್ಯ, ಚಿಕ್ಕಮಗಳೂರು

ಶುಭಹಾರೈಕೆ

ಪರೀಕ್ಷೆ ಎಂಬ ರಣರಂಗದಲ್ಲಿ
ಜ್ಞಾನ ಎಂಬ ಆಶೀರ್ವಾದವನ್ನು ಪಡೆದು
ಪೆನ್ನು ಎಂಬ ಖಡ್ಗವನ್ನು ಹಿಡಿದು
ಶಾಹಿ ಎಂಬ ರಕ್ತವನ್ನು ಚೆಲ್ಲಿ
ನೀವು ಓದುತ್ತಿರುವ ತರಗತಿಯನ್ನು
ಜೈಸಿ ಬನ್ನಿರೆಂದು ಹಾರೈಸುವ

ನಡುಪಟ್ಟಿರ ಪ್ರಕಾಶ್ ಪೊನ್ನಪ್ಪ, ಬೆಂಗಳೂರು

ಕೊಡಗು ಗೌಡ ಸಮಾಜ ಬೆಂಗಳೂರು ಮತ್ತು ವಾರ್ಷಿಕ ಸಭೆ

ಕೊಡಗು ಗೌಡ ಸಮಾಜ ಬೆಂಗಳೂರು ಇದರ ವಾರ್ಷಿಕ ಸಭೆ ಮತ್ತು ಕೈಲ್ ಮುಹೂರ್ತ ಹಬ್ಬವು ಜೊತೆಯಾಗಿ ತಾರೀಕು 19-9-1999ರಂದು ನಡೆಯಿತು. ಪ್ರತಿವರ್ಷವೂ ಅತಿಥಿಗಳನ್ನು ಆಹ್ವಾನಿಸುತ್ತಿದ್ದಂತೆ ಈ ವರ್ಷವೂ ಮೈಸೂರಿನಿಂದ ಅಲ್ಲಿಯ ಕೊಡಗು ಗೌಡ ವಿದ್ಯಾ ಸಂಘದ ಶಾಖೆಯ ಅಧ್ಯಕ್ಷ ನೆಯ್ಯಣಿ ಕುಶಾಲಪ್ಪನವರೂ, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷರಾದ ಕೋರನ ಶ್ರೀ ಪೂಣಚ್ಚ ಮತ್ತು ದಂಪತಿಗಳು ಆಗಮಿಸಿದ್ದರು. ಅವರ ಜೊತೆಯಲ್ಲೇ ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷರಾದ ಮಲ್ಲೇಂಗಡ ಶ್ರೀ ಬೆಳ್ಯಪ್ಪನವರನ್ನು ಆಹ್ವಾನಿಸಿದ್ದು ಈ ವರ್ಷದ ಒಂದು ವಿಶೇಷವಾಗಿತ್ತು.

ಈಗಿನ ದಿನಗಳಲ್ಲಿ ಆಗಬೇಕಿರುವ ಮಹತ್ವದ ಕಾರ್ಯಕ್ರಮಗಳಲ್ಲಿ ಇದೂ ಒಂದು ಎಂದು ನಾನು ನಂಬಿದ್ದೇನೆ. ಕೊಡಗಿನಲ್ಲಿ ನೆಲೆಸಿರುವವರಿಗೆ ಇದು ಬಹು ಪ್ರಾಮುಖ್ಯವೆನಿಸಿದೆ. ಕೊಡಗಿನಲ್ಲಿ ಇತ್ತೀಚೆಗೆ ಜಾತಿ, ಭೇದ, ಗುಂಪುಗಾರಿಕೆ, ಅಸೂಯೆ, ಹೊಟ್ಟೆಕಿಚ್ಚು ಹೆಚ್ಚುತ್ತಿದ್ದು ಜನರಲ್ಲಿ ಪ್ರೀತಿ ವಿಶ್ವಾಸ ಕಡಿಮೆಯಾಗುತ್ತಿದೆ. ಇದಕ್ಕೆ ಸಹಬಾಳ್ವೆಯ ಕೊರತೆಯೇ ಕಾರಣ. ಇತ್ತೀಚಿನ ದಿನಗಳಲ್ಲಿ ಕೊಡಗಿನಲ್ಲಿ ಕೊಡವರ ಮತ್ತು ಗೌಡರ ಸಹ ಬಾಳ್ವಿಕೆಯಲ್ಲಿ ಹಿನ್ನಡೆ ಕಂಡು ಬರುತ್ತಿರುವ ಈ ಸಂದರ್ಭದಲ್ಲಿ ಮಲ್ಲೇಂಗಡ ಶ್ರೀ ಬೆಳ್ಯಪ್ಪನವರು ಆಗಮಿಸಿದ್ದುದು ಮಹತ್ವವೆನಿಸಿದೆ.

ಕೊಡಗಿನಲ್ಲಿ ಕೊಡಗು ಮುಕ್ತಿ ಮೋರ್ಚಾದ ಪ್ರಭಾವ ಹೆಚ್ಚಾದಾಗ ಅದಕ್ಕೆ ವಿರುದ್ಧವಾಗಿ ಕೆಲವು ಸಂಘಟನೆಗಳು ಹುಟ್ಟಿಕೊಂಡವು. ಇದ ಸಹಜ ಸ್ಥಿತಿ ಪರ, ವಿರುದ್ಧವೆಂದು ಆಗಾಗ ಸಭೆ, ರ್‍ಯಾಲಿ ಬಂದ್‌ಗಳು ಜರುಗುತ್ತಲೇ ಇದ್ದರೆ ದಿನೇ ದಿನೇ ಮನಸ್ತಾಪ, ದ್ವೇಷ ಹೆಚ್ಚಾಗಿ ಮುಂದೆ ಅನೇಕ ಅನಾಹುತಗಳೇ ಸಂಭವಿಸಬಹುದು. ಈ ಕಾರಣಕ್ಕಾಗಿಯೇ ಹೆಚ್ಚಿನ ಕಾಲಹರಣ ವಾಗುವುದರಿಂದ ಪ್ರಗತಿ ಕುಂಟಿತವಾಗುತ್ತದೆ. ಅನಾಹುತಗಳಿಂದ ಪ್ರಾಣಹಾನಿ, ಆಸ್ತಿಪಾಸ್ತಿಗಳಿಗೆ ಹಾನಿಯಾಗುವುದಲ್ಲದೆ ಕೋರ್ಟು, ಕಛೇರಿ ಎಂದು ಹಣ ಸಮಯ ಎಲ್ಲಾ ವ್ಯರ್ಥವಾಗುವುದು. ಕೊಡಗು ಕರ್ನಾಟಕಕ್ಕೆ ಸೇರಿದ ನಂತರ ಅನೇಕ ಕೆಲಸ ಕಾರ್ಯಗಳು ಆಗಿವೆ ಮುಂದೆ ಅದೆಷ್ಟೊ ಆಗಬೇಕಿವೆ.

ಅನೇಕ ರಾಜ್ಯಗಳಲ್ಲಿ ಜನರು ಕಿತ್ತಾಡುವಂತೆ ಉದಾಹರಣೆಗೆ ಆಂಧ್ರದಲ್ಲಿ, ಬಿಹಾರ, ಅಸ್ಸಾಂ, ಉತ್ತರ ಬಂಗಾಳ, ಪಂಜಾಬ್, ಕಾಶ್ಮೀರ ಹಾಗೂ ಇನ್ನಿತರೆ ಕಡೆಗಳಲ್ಲಿ ಪ್ರತ್ಯೇಕತೆಗಾಗಿ ನಿತ್ಯವೂ ನಡೆಯುವ ಅಹಿಂಸೆ, ರಕ್ತಪಾತ ನಮ್ಮ ಕರ್ನಾಟಕದಲ್ಲಿ ಅದರಲ್ಲೂ ಅತಿ ಪುಟ್ಟ ಜಿಲ್ಲೆಯಾದ ಕೊಡಗಿನಲ್ಲಿ ಆಗುವುದು ಬೇಡ. ಇದಕ್ಕಾಗಿ ಜಿಲ್ಲೆಯ ಹಿರಿಯರು ರಾಜಕಾರಣಿಯರು, ಎಲ್ಲಾ ಜನಾಂಗದ ಮುಖಂಡರು, ಮಾಧ್ಯಮಗಳು, ಜಿಲ್ಲೆಯ ಹಿತೈಷಿಗಳು, ಬುದ್ಧಿ ಜೀವಿಗಳು ಎಚ್ಚೆತ್ತು ಒಂದಾಗಿ ಕೊಡವರು, ಗೌಡರು ಒಂದೇ ನೊಗದ ಎರಡು ಎತ್ತುಗಳಂತೆ ಜೊತೆಗೂಡಿ ಪ್ರತ್ಯೇಕತೆಯನ್ನು ಬಿಟ್ಟು ಕೊಡಗಿನ ಸರ್ವತೋಮುಖ ಏಳಿಗೆಗೆ ಒಗ್ಗಟ್ಟಿನಿಂದ ದುಡಿದು, ಭಾರತದಲ್ಲಿಯೇ ಒಂದು ಮಾದರಿ ಜಿಲ್ಲೆಯಾಗಿ ಪರಿವರ್ತಿಸಲು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ.

ಗೋವಿಂದಮ್ಮನ ಅಚ್ಚಯ್ಯ, ಬೆಂಗಳೂರು

18ನೇ ಪುಟದಿಂದ

"ಮತ್ತೇನು ಮಾಡಬೇಕು?"

"ಸತ್ಯ ಶೋಧನೆಯಲ್ಲಿ ಸಹಾಯ"

ಪೂಜಾರಿ ನಗುತ್ತಾ "ಅಗತ್ಯವಾಗಿ ಎರಡು ಹೊತ್ತು ದೇವರ ಪೂಜೆ ಮುಗಿದ ನಂತರ ನೀನು ಯಾವಾಗ ಕರೆದರು ಸಹ ನಿನ್ನ ಸಹಾಯಕ್ಕೆ ಬರುತ್ತೇನೆ"

ರೇವತಿ ನಗುತ್ತಾ "ಥ್ಯಾಂಕ್ಸ್"

ರೇವತಿ ಈಗ ಡ್ರೆಸ್ ಬದಲಿಸಿಕೊಂಡು ಒಬ್ಬಳೇ ಕಾಡಿನ ಕಡೆ ನಡೆಯಲಾರಂಭಿಸಿದಳು.

ಭಯವಾಗುತ್ತಿದೆ, ಆದರೂ ನಗುತ್ತಿದ್ದಾಳೆ.

ತಂಗಾಳಿ ಹಿತವಾಗಿ ಬೀಸುತ್ತಿದೆ.

ರೇವತಿ ಈಗ ಹುತ್ತದ ಹತ್ತಿರ ಬಂದಳು. ಹತ್ತು ಅಡಿಗಳಷ್ಟು ಎತ್ತರವಾಗಿದ್ದ ಹುತ್ತಗಳು !

ಹಾವುಗಳು ಕಾಣುತ್ತಿಲ್ಲ !

ಆದರೆ ಹುತ್ತ ಅಗೆದರೆ...?

ಎಂಥೆಂತಹ ಸರ್ಪಗಳು ಹೊರ ಬರುತ್ತದೋ ಎಂದು ಭಯದಿಂದ ನೋಡಿದಳು.

ಸ್ವಲ್ಪ ಶಬ್ಧವಾದರೂ ಸಹ ಸರ್ಪವೇ ಬಂದಿತೇನೋ ಎಂದು ಭಯದಿಂದ ನೋಡುತ್ತಿದ್ದಳು.

ಸಮಯ ಉರುಳುತ್ತಿತ್ತು !

ಹೆಜ್ಜೆ ಶಬ್ಧ ಕೇಳಿಸಲಿಲ್ಲ !

ಆದರೆ..... ಆದರೆ ಅವಳಿಗೆ ನೆಲದ ಮೇಲೆ ಮಾನವ ಪ್ರಕೃತಿಯ ನೆರಳು ಕಂಡು ಬಂದಿತು !

ಯಾರೋ ಅವಳ ಹಿಂದೆ ನಿಂತಿದ್ದರು !?

ರೇವತಿ ಹಿಂತಿರುಗಿದಳು !

ಆದರೆ ತುಂಬಾ ತಡವಾಗಿತ್ತು !

(ಮುಂದುವರೆಯುತ್ತದೆ)

ಒಗಟುಗಳು/ವಡ್ಸಕಥೆ

೧. ಆರು ದಾರೆಗಳುಂಟು, ಹೀರೇಕಾಯಲ್ಲ,
ಅದರೊಳಗೆ ಹುಳಿಯುಂಟು ನಿಂಬೆಹಣ್ಣಲ್ಲ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೨. ನೀರಲ್ಲಿ ಹುಟ್ಟುವುದು ನೀರಲ್ಲಿ ಬೆಳೆಯುವುದು,
ನೀರನ್ನು ಮುಟ್ಟಿದಾಗ ಜಗ್ಗೆಂದು ಜರಿಯುವುದು,
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೩. ಉಂಡು ಹೊಟ್ಟೆಯ ಬೆಳೆಸಿ ಬಿದ್ದುಕೊಂಡವನೆ
ನಾಲ್ಕು ಕಾಲುಂಟು ನಡೆಯಲಾರಣ್ಣ,
ಬೇಕಾದ ಕಣ್ಣುಂಟು ನೋಡಲಾರಣ್ಣ,
ಆಚೆಗೆ ನೂಕಲು ಜೀವವಿಲ್ಲಣ್ಣ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೪. ಕಪ್ಪಾಗಿ ನಿಂತವಳು ಜಾಣೆ ಹೆಣ್ಣಲ್ಲ
ಒಪ್ಪಾಗಿ ಬಳೆ ತೊಟ್ಟು ಮಾತಾಡಲಿಲ್ಲ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೫. ಒಂದು ಮರ ಹುಟ್ಟಿ ಹನ್ನೆರಡು ಕವಲಾಗಿ,
ಒಂದೊಂದು ಕವಲಿಗೆ ಮೂವತ್ತು ಎಲ್ಲೆಯಾದೋ
ಇದರಲ್ಲಿ ಹದಿನೈದು ಕರಿದು ಬಿಳಿಯದಾದೋ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೬. ಗರ ಗರ ತಿರುಗುವುದು ಚಕ್ರ ತಾನಲ್ಲ,
ರೆಕ್ಕೆಗಳು ಎರಡುಂಟು ಪಕ್ಷಿ ತಾನಲ್ಲ
ಕೊಂಬುಗಳು ಎರಡುಂಟು ಮೃಗ ತಾನಲ್ಲ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೭. ಸುತ್ತು ಸುತ್ತು ಸುತ್ತುವುದು ವಾಲೆ ತಾನಲ್ಲ
ಪೆಟ್ಟಿಗೆಗೆ ತುಂಬುವುದು ಆಭರಣ ತಾನಲ್ಲ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೮. ಹದಿನಾರು ಲಯವುಳ್ಳವನೊಬ್ಬ ಶೆಟ್ಟಿ
ಅಧಿಕಧಿಕ ನೂರಾರು ಕುದುರೆಗಳನ್ನು ಕಟ್ಟಿ
ಸಾಲು ಸಾಲಿಗೆ ಸಾವಿರಾರು ಹೊನ್ನುಗಳನ್ನು ಮುಟ್ಟಿ
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೯. ಬೇಲಿಯಲ್ಲಿ ಹುಟ್ಟುವುದು, ಬೆಟ್ಟಕ್ಕೆ ಹಬ್ಬುವುದು,
ಕಾಯಿಕುಯ್ದು, ಬಾಯಿ ಮುಚ್ಚಿ ಬೆರಳಲ್ಲಿ ಮಾತಾಡುವುದು
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

೧೦. ಅಂಗಳದಲ್ಲಿ ಹುಟ್ಟುವುದು, ಅಂಗಳದಲ್ಲಿ ಬೆಳೆಯುವುದು
ಅಕ್ಕನ ಮಕ್ಕಳ ರಂಗೂನ ಕರೆಯುವುದು
ಇದು ಹೇಳೋ ಬಲು ಜಾಣ ನಿನಗರಿಯುವುದಿಲ್ಲ?

ಉತ್ತರಗಳು : ೧. ಪಣ್‌ಪುಳಿ ೨. ಉಪ್ಪು ೩. ಬೆತ್ತದ ಕುರ್ಚಿ ೪. ಒನಕೆ ೫. ವರ್ಷ, ತಿಂಗಳು, ಅಮವಾಸ್ಯೆ, ಹುಣ್ಣಿಮೆ ೬. ಬೀಸುವ ಕಲ್ಲು ೭. ಹಾವು ೮. ಸೂರ್ಯ ೯. ತಂಬೂರಿ ೧೦. ಕೋಳಿ ಹುಂಜ

ಕೊಡಗನ ಅನು ಕಿಶೋರ್, ಹೆಗ್ಗಡದೇವನ ಕೋಟೆ

ಜ್ಞಾನ ಮಂಜರಿ

೧. ಪುಸ್ತಕಗಳು ಸಂಸ್ಕೃತಿಯ ಅಧ್ಯಾಯದ ಗ್ರಂಥಗಳು

೨. ಪುಸ್ತಕ ಓದುವ ಹವ್ಯಾಸವುಳ್ಳವನು ಎಲ್ಲಿ ಹೋದರು ಸಂತೋಷವಾಗಿರಬಲ್ಲ.

೩. ಓದುಗರೇ ಭಕ್ತರು, ಗ್ರಂಥಗಳೇ ದೇವರು.

೪. ಪುಸ್ತಕಗಳು ಆಯಾಕಾಲದ ಜೀವಂತ ಪ್ರತೀಕ

೫. ಉತ್ತಮ ಗ್ರಂಥಗಳು ನಾಡಿನ ಸಂಸ್ಕೃತಿಯ ಪ್ರತೀಕ

೬. ಗ್ರಂಥಾಲಯವಿಲ್ಲದ ಕೋಣೆ ಆತ್ಮವಿಲ್ಲದ ದೇಹದಂತೆ

೭. ವಿದ್ಯೆಗೆ ವಿನಯವೇ ಭೂಷಣ

೮. ಜೀವನ ಬಿಡಿಸಲಾಗದ ಒಗಟು

೯. ಚುಚ್ಚುಮಾತುಗಳಿಂದ ಮನನೋಯಿಸುವುದಕ್ಕಿಂತ, ಮೂರ್ಖನೆನಿಸುವುದೇ ಲೇಸು.

ಸಂಗ್ರಹ : ಮುಕ್ಕಾಟೀರ ವಸಂತಿ ಈರಪ್ಪ, ಕೈಕೇರಿ ಗ್ರಾಮ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ನಡೆದ ಲಾಟರಿ ಟಿಕೇಟಿನ ವಿಜೇತ ಸಂಖ್ಯೆಗಳು

ಮೊದಲ ಬಹುಮಾನ - 07645 ದ್ವಿತೀಯ ಬಹುಮಾನ - 076661 ತೃತೀಯ ಬಹುಮಾನ - 07370

ಸಮಾಧಾನಕರ ಬಹುಮಾನ

02430, 05867, 04129, 02844, 01812, 04708, 05315, 05638, 00398, 02740

ನಿವೇಶನಗಳು ಲಭ್ಯವಿದೆ

ಮೈಸೂರು ನಗರದ ವಿಜಯನಗರ ಬಡಾವಣೆಯಲ್ಲಿ ನಿವೇಶನಗಳು ಈ ಕೆಳಗಿನ ದರಗಳಲ್ಲಿ ಮಾರಾಟಕ್ಕೆ ಲಭ್ಯವಿದೆ. ಖಾಯಿಸು ಇರುವ ಆಸಕ್ತರು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬಹುದು.

ವಿಜಯನಗರ 4ನೇ ಹಂತ	30' × 40'	1 ರಿಂದ 1½ ಲಕ್ಷ	60' × 40'	2½ ರಿಂದ 3 ಲಕ್ಷ
ವಿಜಯನಗರ 3ನೇ ಹಂತ	30' × 40'	2 ರಿಂದ 2½ ಲಕ್ಷ	60' × 40'	3½ ರಿಂದ 4½ ಲಕ್ಷ
ವಿಜಯನಗರ 2ನೇ ಹಂತ	30' × 40'	3 ರಿಂದ 4 ಲಕ್ಷ	60' × 40'	4½ ರಿಂದ 5½ ಲಕ್ಷ
ವಿಜಯನಗರ 1ನೇ ಹಂತ	30' × 40'	4 ರಿಂದ 5 ಲಕ್ಷ	60' × 40'	6 ರಿಂದ 8 ಲಕ್ಷ

ಶ್ರೀ ಮರಿಗೌಡ,
ಶ್ರೀ ವೆಂಕಟೇಶ್ವರ ರಿಯಲ್ ಎಸ್ಟೇಟ್,
ವಿವೇಕಾನಂದ ಸರ್ಕಲ್, ದೂರವಾಣಿ : 0821/513348

National Ex-Servicemen C0-Ordination C0mmittee (Karnataka Unit)

Recognised by Ministry of Defence, Govt. of India, Recognised by Govt. of Karnataka
Maha Sangama Nilaya, Muniswamappa Road, P.N.S. Layout, 80 feet Road,
2nd Cross, Near Chandra & Co., Bangalore - 560 084. Ph : 080/5450456

Ref. No. : NExCC/KTK/Gess/174/99 Date : 17-10-1999

To,
All SEC Members
Dear Members,

Subject : Dearness relief on pension to Re-Employed Pensioners/
Family Pensioners is granted.

It is matter of great satisfaction for us that Govt. has finally granted the dearness relief on pension to Re-Employed Pensioners/Family Pensioners vide Ministry of Personnel Public Grievances and Pensioners Circular No. 45/73/97P & PW (G) dated 2nd July 1999.

Dearness relief on pension will be payable with effect from 18-07-1997 strictly as per the above said circular. For this purpose defence ministry also circulated the same order No. 7(1)95/ D(Pen&Sers)99 dated 6th Oct 1999 enclosed for Your reference.

State office taking up the matter with service Head Quarters and Ministry of Defence/PMO'S Officer for further improvement in this circular through our central office.

I appeal to all members to mobilize the funds of our state unit. Now our state unit finance is in very poor conditional are requested to send donations to our state unit by D. D. or Cheque in the name of Gen. Secretary NEXCC Karnataka.

Thanking You,

Yours Faithfully

(M. S. Haragaball)
Gen. Secretary

(ಮಾಜಿ ಸೈನಿಕರ ಅವಗಾಹನೆಗಾಗಿ ಯಥವತ್ತಾಗಿ ಪ್ರಕಟಿಸಲಾಗಿದೆ)

-ಸಂಗಾತಿ

3ನೇ ವರ್ಷದ ಪುಣ್ಯಸ್ಮರಣೆ



ದಿ. ನಡುಮನೆ ಎ. ಸುಬ್ಬಯ್ಯ

ತಾರೀಖ್ 3-11-96ರ್ಲ್ಲಿ ಹೊತ್ತಾರೆ ನೀವು ನಮ್ಮನ್ನಬಿಟ್ಟ್ ವೈಕುಂಠವಾಸಿಯಾದಿರಿ. ನಿಮ್ಮ ಅಗಲಿಕೆ ಬ್ಯಾನೆ ನಮಗೆ ಮರೆಯಕೆ ಆದುಲ್ಲೆ. ನಿಮ್ಮ ಹಿತನುಡಿಗ, ಒಡನಾಟಗ ಯಾಗೊಳು ಪ್ರತಿಬಿಂಬಿಸುತ್ತಾ ಮಾದ್‌ರಿ ಆಗ್ನೊಳರಿ. ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮ ಚಿರಶಾಂತಿನ ಕರ್ಣ್‌ಸಲಿತೇಳಿ ಪ್ರಾರ್ಥಿಸುವೆ.

ದುಃಖತಪ್ತ ಹೆಂಣ್ : ನ. ಸು. ಬೊಳ್ಳಮ್ಮ, ವಿ. ಬಾಡಗ

ಮಕ್ಕ : ಶ್ರೀಮತಿ ಮತ್ತ್ ಶ್ರೀ ನಡುಮನೆ ಶಂಭು ಮತ್ತ್ ಸಂಸಾರ, ಆಟೋವರ್ಕ್ಸ್, ಮಡಿಕೇರಿ
ಶ್ರೀಮತಿ ಮತ್ತ್ ಶ್ರೀ ನಡುಮನೆ ಗಣಪತಿ ಮತ್ತ್ ಸಂಸಾರ, ವಿ. ಬಾಡಗ ಗ್ರಾಮ
ಶ್ರೀಮತಿ ಮತ್ತ್ ಶ್ರೀ ನಡುಮನೆ ಕಾರ್ಯಪ್ಪ ಮತ್ತ್ ಸಂಸಾರ, ಕೆ. ಎಸ್. ಪಿ., ಮಡಿಕೇರಿ
ಶ್ರೀಮತಿ ಮತ್ತ್ ಶ್ರೀ ನಡುಮನೆ ಚಂಗಪ್ಪ ಮತ್ತ್ ಸಂಸಾರ, ಬಿ. ಇ. ಎಂ. ಎಲ್., ಮೈಸೂರು

ಮಗಕ್ಕ, ಅಳಿಯಂದ್ರ್ ಮತ್ತ್ ಮೊಮ್ಮಕ್ಕಗ :
ಶ್ರೀಮತಿ ಮತ್ತ್ ಶ್ರೀ ಕೊಟ್ಟಂಗೇರಿ ಮುತ್ತಮ್ಮ ಗೋಪಾಲ ಮತ್ತ್ ಸಂಸಾರ, ಮಾದಾಪುರ
ಶ್ರೀಮತಿ ಮತ್ತ್ ಶ್ರೀ ಕೊರಿಯಾರ್ ತಾಯಮ್ಮ ಪುಟ್ಟುಸ್ವಾಮಿ ಮತ್ತ್ ಸಂಸಾರ, ಕೆದಮುಳ್ಳೂರು
ಶ್ರೀಮತಿ ಮತ್ತ್ ಶ್ರೀ ಸಿರಕಜೆ ದೇವಕ್ಕಿ ಚಿಕ್ಕಯ್ಯ ಮತ್ತ್ ಸಂಸಾರ, ಬೆಂಗಳೂರು

ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ. ಕುದುಪಜೆ ಎ.ಸುಂದರ (ವಾಣಿಜ್ಯ ತೆರಿಗೆ ಅಧಿಕಾರಿ)
ಜನನ : 8-1-1956 ಮರಣ : 28-11-1998

28-11-1998ರಂದು ನೀವು ನಮ್ಮನ್ನಗಲಿ ವೈಕುಂಠವಾಸಿಯಾದಿರಿ. ನಿಮ್ಮ ಸವಿನೆನಪು ಮಾತ್ರ ನಮಗಿಂದು ಉಳಿದಿದೆ. ನಿಮ್ಮ ಆದರ್ಶಗುಣಗಳು ನಮಗೆ ದಾರಿದೀಪವಾಗಿದೆ. ಪರಮಾತ್ಮನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಅನುದಿನವೂ ಪ್ರಾರ್ಥಿಸುತ್ತೇವೆ.

ಪತ್ನಿ : ಭಾನುಮತಿ
ಮಕ್ಕಳು : ವಿನಿತ್ ಕುಮಾರ್
ಮಿಥುನ್ ಕುಮಾರ್

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.